ರಾಮಾಯಣದ ಯಕ್ಷಗಾನ ಪ್ರಸಂಗಗಳು

ರಾವಣೋದ್ಭವ	0	5	0
ರಾವಣಪ್ರತಾಪ	0	6	0
ಕಾರ್ತವೀರ್ಯಾರ್ಜುನಕಾಳಗ	0	6	0
ಪುತ್ರಕಾಮೇಷ್ಟಿ	0	5	0
ರಾಮಪಟ್ಟಾಭಿಷೇಕ (ಅಯೋಧ್ಯಾಕಾಂಡ)	0	4	0
ರಾಮರಾಜ್ಯವಿಯೋಗ	0	6	0
ಪಾದುಕಾಪಟ್ಟಾಭಿಷೇಕ	0	6	0
ಪಂಚವಟಿ ವಾಲಿಸುಗ್ರೀವರ ಕಾಳಗ	0	5	0
ಸೇತುಬಂಧನ	0	3	6
ಅಂಗದಸಂಧಾನ	0	4	0
,, ಅರ್ಥಸಹಿತ	0	12	0
ಚೂಡಾಮಣಿ (ಸುಂದರಕಾಂಡ)	0	4	0
,, ಅರ್ಥಸಹಿತ	0	12	0
ಮಾರೀಮುಖನ ಕಾಳಗ	0	5	0
ಮಕರಾಕ್ಷಕಾಳಗ	0	2	0
ಇಂದ್ರಜಿತುಕಾಳಗ	0	3	0
ತರಣಿಸೇನಕಾಳಗ	0	4	0
ನಾಗಾಸ್ತ್ರ ಕುಂಭಕರ್ಣಕಾಳಗ	0	4	0
ಕುಂಭಕರ್ಣಕಾಳಗ	0	2	0
ಕಾಲನೇಮಿಕಾಳಗ	0	6	0
ಮೈರಾವಣಕಾಳಗ	0	4	0
ರಾವಣಾಸುರಕಾಳಗ	0	5	0
ಶ್ರೀರಾಮನಿಜಪಟ್ಟಾಭಿಷೇಕ	0	5	0
ಸೀತಾವಿಜಯ	0	5	0
ಶತಕಂಠರಾಜಚರಿತ್ರೆ	0	2	0
ರಾಮಾಂಜನೇಯಕಾಳಗ	0	7	0
ಸುಬಾಹುಕಾಳಗ	0	6	0
ಲವಕುಶರ ಕಾಳಗ	0	5	0

ಕಾನಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ

G. K. Bhat

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ
ಉಡುಪಿ

G. K. Bhat, M.A.,
MANGALORE.

ಶ್ರೀಮದ್ರಾಮಾಯಣದೊಳಗಣ

ಯಕ್ಷಗಾನ

ಅತಿಕಾಯಕಾಳಗ

★

ಎರಡನೆಯ ಅಚ್ಚು

ಶ್ರೀಕೃಷ್ಣಮುದ್ರಣಾಲಯ ಉಡುಪಿ

1950

ಐದಾಣೆ

ಪಾತ್ರಗಳ ವಿವರ

ಶ್ರೀರಾಮ
ಸುಗ್ರೀವ
ರಾವಣ
ಚಾರಕ
ಅತಿಕಾಯ
ಪುರನಾರಿಯರು
ವಿಭೀಷಣ
ಲಕ್ಷ್ಮಣ
ಅತಿಕಾಯನ ಸಾರಥಿ
ಧಾನ್ಯಮಾಲಿನಿ
ಅಂಗದ
ಹನುಮಂತ
ಸೀತೆ
ತ್ರಿಜಟೆ
ಜಾಂಬವ
ಚಾರಕ [ರಾವಣನಕಡೆ]
ಕಾಲನೇಮಿ
ದೇವಸ್ತ್ರೀ

ಎಲ್ಲ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

G. K. Bhat, M.A.,
MANGALORE.

ಶ್ರೀಃ

ಶ್ರೀಸೀತಾರಾಮಚಂದ್ರಾಯ ನಮಃ

ಶ್ರೀಮದ್ರಾಮಾಯಣದೊಳಗಣ
ಯಕ್ಷಗಾನ
ಅತಿಕಾಯ ಕಾಳಗ

ಶಾರ್ದೂಲವಿಕ್ರೀಡಿತಂ

ಶ್ರೀಮದ್ವಾಯುಕುಮಾರಸೇವಿತಪದಂ ಸೀತಾಮನೋಸೌಖ್ಯದಂ
ಸೋಮಾದಿತ್ಯಸಹಸ್ರದೀಪ್ತಮನಘಂ ಸಾಕೇತವಾಸಂ ವಿಭುಮ್ ।
ಶ್ಯಾಮಾಂಗಂ ಗಿರಿಜಾಪತಿಪ್ರಿಯಕರಂ ಶಾಂತಂ ಕೃಪಾಸಾಗರಂ
ರಾಮಂ ಸದ್ವರಪುಣ್ಯನಾಮನಿಮಗೀಗಾನಂದಸಂದೋಹಮಮ್ ॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಶ್ರೀಗಣಪ ಗಿರಿಜಾತೆಯಾತ್ಮಜ । ಯೋಗಿನುತಪದಪಂಕಜ । ಭೋಗಿಭೂಷಣಸುತ ಗುಹಾಗ್ರಜ । ನಾಗವದನ ಚತುರ್ಭುಜ ॥ ಶರಣು ಶರಣು ॥ ॥ ೧ ॥ ಏಕದಂತ ಸುಧಾಂಶುಶೇಖರ । ಕೋಕನದಸಮಭಾಸುರ ॥ ಶೋಕಭವಭಯದೂರ ಭಜಕಾ । ನೀಕ ನೆರೆ ಪರಿಪಾಲಕ ॥ ಶರಣು ಶರಣು ॥ ೨ ॥ ಕಲುಷಹರ ವಿಘ್ನೌಘನಾಶನ । ಲಲಿತ ಮೂಷಿಕವಾಹನ ॥ ಅಲಘು ವಿಕ್ರಮಗೋಷ್ಠಪಟ್ಟಣ । ನಿಲಯ ಭುಜಗವಿಭೂಷಣ ॥ ಶರಣು ಶರಣು ॥ ೩ ॥

ವಾರ್ಧಿಕ

ಗಿರಿವರಸುತಾಲೋಲನಂ ಭಜಕಪಾಲನಂ । ಕರುಣಾರಸಪರಿಪೂರ್ಣನಂ ಸ್ಫಟಿಕವರ್ಣನಂ । ದುರಿತತಿಮಿರಾದಿತ್ಯನಂ ಸುರಸ್ತುತ್ಯನಂ ಸೋಮನಂ

ಜಿತಕಾಮನಂ ॥ ವರಪುಣ್ಯಚಾರಿತ್ರನಂ ಫಾಲನೇತ್ರನಂ । ಸರಸಿಜಾಹಿತ ಚೂಡನಂ ವೃಷಾರೂಢನಂ । ಕರಿವದನಗುಹತಾತನಂ ಲೋಕನಾಥನಂ ನುತಿಸುವೆನು ಮನ್ಮನದೊಳು ॥ ೧ ॥ ಕಮಲದಳನೇತ್ರೆಯಂ ಕಮನೀಯ ಗಾತ್ರೆಯಂ । ಹಿಮಶೈಲಜಾತೆಯಂ ಗಜಮುಖನ ಮಾತೆಯಂ । ದ್ಯುಮಣಿ ಶತಭಾಸೆಯಂ ತಿಲಕುಸುಮನಾಸೆಯಂ ನೃತಮೃಗಮದೋಲ್ಲಾಸೆಯಂ ॥ ನಮಿತಜನಪಾಲೆಯಂ ಸಂಗೀತಲೋಲೆಯಂ । ವಿಮಲಗುಣಭರಿತೆಯಂ ವರ ಪುಣ್ಯಚರಿತೆಯಂ । ಯಮಿಕುಲೋದ್ಧಾರೆಯಂ ಶರಧಿಗಂಭೀರೆಯಂ ಸೆರಗೊಡ್ಡಿ ಪ್ರಾರ್ಥಿಸುವೆನು ॥ ೨ ॥

ಭಾಮಿನಿ

ಸಿರಿಸರಸ್ವತಿಯರಿಗೆರಗಿ ಪಂ । ಕರುಹಭವನನು ನುತಿಸಿ ರಾಮನ । ಪರಮ ಭಕ್ತನೆನಿಪ್ಪ ಪವನಾತ್ಮಜನ ಬಲಗೊಂಡು ॥ ಸುರಪ ಮುಖ್ಯಾಮರರ ಪ್ರಾರ್ಥಿಸಿ । ಧರೆಯೊಳುಳ್ಳ ಸಮಸ್ತ ಕವಿಗಳ । ಕರುಣವನು ಕೈಗೊಂಡು ಪೇಳುವೆನೀ ಕಥಾಮೃತವ ॥ ೧ ॥

ದ್ವಿಪದಿ

ಆದಿಕವಿ ವಾಲ್ಮೀಕಿಮುನಿರಾಯಗೆರಗಿ । ಸಾದರದಿ ಗುರುವರನಪದಕೆ ತಲೆವಾಗಿ ॥ ೧ ॥ ಅಧ್ಯಾತ್ಮ ರಾಮಚರಿತೆಯಲಿ ಲಕ್ಷ್ಮಣನು । ಚೋದ್ಯವೆನೆ ದಶಕಂಠನಿಂದ ಮೂರ್ಛೆಯನು ॥ ೨ ॥ ತಳೆದಿರಲು ರಾಘವನ ನೇಮದೊಳಗಂದು । ಕಲಿಹನುಮನಮಲಸಂಜೀವನವ ತಂದು ॥ ೩ ॥ ಜೀವಿಸಿದ ಕಥನವನು ಯಕ್ಷಗಾನದಲಿ । ನಾ ವಿರಚಿಸುವೆ ಲೋಕನಾಥನೊಲುಮೆಯಲಿ ॥ ೪ ॥ ನೇಮ ಗಣ ಲಕ್ಷಣಾದಿಗಳೊಂದನರಿಯೆ । ಪ್ರೇಮದಿಂದಲಿ ರಕ್ಷಿಸೆನ್ನ ರಘುಪತಿಯೆ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ವರ ಮಹಾ ಕೈಲಾಸಗಿರಿಯಲಿ । ತರುಣಿ ಪಾರ್ವತಿಗತುಳ ಹರುಷದಿ । ಪುರಹರನು ಶ್ರೀರಾಮಚರಿತವ । ನೊರೆವುತಿರಲು ॥ ೧ ॥ ನಮಿಸಿ ಪುನರಪಿ ಕೇಳ್ದಳಂದಾ । ಕಮಲದಳಲೋಚನೆಯು ಕಾಂತನ । ವಿಮಲ ಪದಪಂಕಜಕೆ ಘನತರ । ಮಮತೆಯಿಂದ ॥ ೨ ॥ ಪತಿಯೆ ಕೇಳೀತಕೆ ಸುಮಿತ್ರಾ । ಸುತನು ರಾವಣನಿಟ್ಟ ಶಕ್ತಿಯು । ಹತಿಗೆ ಮೂರ್ಛಿತನಾಗಿ ಮಲಗಿದ । ನತುಳಬಲನು ॥ ೩ ॥ ಎಂತು ಸಂಜೀವನವನಾ ಹನು । ಮಂತ

ತಾ ತಂದೆಬ್ಬಿಸಿದನೆಂ । ಬಂತರಂಗವ ಪೇಳೆನಲ್ಕ । ತ್ಯಂತ ಮುದದಿ ॥ ೪ ॥ ಕರಿಗೊರಳನಾ ನಿಜಸತಿಯನತಿ । ಕರುಣದಿಂ ಪಿಡಿದೆತ್ತಿ ತಳ್ಕಿಸಿ । ಪರಮ ಪುಣ್ಯಚರಿತ್ರವನು ಸಾ । ದರದೊಳುಸಿರ್ದ ॥ ೫ ॥

ವಾರ್ಧಿಕ

ಗಿರಿಜೆ ಕೇಳ್ ಧರೆಯ ದೂರಂ ಕೇಳ್ದು ಶ್ರೀವಿಷ್ಣು । ನರನಾಥ ದಶರಥಂ ಗುದಿಸಿ ರಾಮಾಖ್ಯೆಯೊಳು । ವರ ಕೌಶಿಕನ ಯಜ್ಞಮಂ ಕಾಯ್ದು ಸೀತೆಯಂ ವರಿಸಿ ಭಾರ್ಗವನಥಟನು ॥ ಮುರಿದು ಪಿತನಾಜ್ಞೆಯಂ ಪಾಲಿಸಲ್ಕಾಗಿ ತ । ನ್ನರಸಿ ಲಕ್ಷ್ಮಣರನೊಡಗೊಂಡು ಕಾನನಕಯ್ದಿ । ವರ ಪಂಚವಟಿಯೊಳತಿ ಬಲವಂತ ಖರದೂಷಣಾದಿಗಳ ಖಂಡಿಸಿದನು ॥ ೧ ॥ ಖಳ ರಾವಣಂ ಸೀತೆಯನು ಕದ್ದು ಕೊಂಡೊಯ್ಯ । ಳಳಲುತ್ತ ಮುಂದಯ್ತರಲ್ ಪಥದಿ ಬಿದ್ದಿರ್ದ । ಕಲಿ ಗೃಧ್ರರಾಜನಂ ಕಂಡರಿದು ಪವಮಾನಸುತನಿಂದ ಸುಗ್ರೀವನ ॥ ಸಲೆ ಸಖ್ಯವನ್ನೆಸಗಿ ವಾಲಿಯಂ ಸಂಹರಿಸು । ತೆಲರಣುಗ ತಂದ ಚೂಡಾಮಣಿಯ ನೀಕ್ಷಿಸುತ । ಬಲು ಮರ್ಕಟರ ಕೂಡಿಕೊಂಡು ಲಂಕಾಪುರವ ಮುತ್ತಿದಂ ರಘುನಾಥನು ॥ ೨ ॥

ಭಾಮಿನಿ

ವರ ವಿಭೀಷಣನಿಂದ ಕೆಲಬರು । ತರಣಿನಂದನಹನುಮರಿಂ ಕೆಲ । ರಿಂದೆ ಜಾಂಬವ ವೀರ ನಳ ನೀಲಾದ್ಯರೊಳು ಕೆಲರು ॥ ಸುರಪಸುತನ ಕುಮಾರನಲಿ ಸಂ । ಗರದಿ ಖತಿಯಲಿ ಕಾದಿ ಮಡಿದರು । ದುರುಳ ದೈತ್ಯರು ಪೇಳಲೇನದ್ಭುತದ ರಣರಭಸ ॥ ೧ ॥

ರಾಗ ಭೈರವಿ ಝಂಪೆತಾಳ

ಕಾಮಿನೀಮಣಿ ಕೇಳು । ರಾಮಚಂದಿರನು ಬಳಿ । ಕಾ ಮಹಾ ಕಪಿಗಳು । ದ್ದಾಮಸಾಹಸವ ॥ ೧ ॥ ಕಂಡು ತೋಷವನು ಕೈ । ಗೊಂಡು ಮತ್ತವರನುರೆ । ಕೊಂಡಾಡಿದನು ಪ್ರಬಲ । ಪಿಂಡರಿವರೆಂದು ॥ ೨ ॥ ಮೂಗಿನಲಿ ಬೆರಳಿಟ್ಟು । ತೂಗಿ ನಿಜ ಮಕುಟವನು । ರಾಘವನು ರವಿತನಯ । ಗಾಗ ನಗುತೆಂದ ॥ ೩ ॥ ಬಲು ದಣಿದುದೈ ನಮ್ಮ । ಬಲವೆಲ್ಲವಿಂದಿನಲಿ । ಬಲವಂತ ರಾಕ್ಷಸರ । ಗೆಲುವಬಗೆಗಾಗಿ ॥ ೪ ॥ ಎಂಬನಿತರೊಳು ತರಣಿ । ಯಂಬರವನಿಳಿದನಪ । ರಾಂಬುಧಿಗೆ ಮುಗಿದವಂ । ದಂಭೋಜನಿಕರ ॥ ೫ ॥

ಭಾಮಿನಿ

ಬಳಿಕ ಮರುದಿನವಿತ್ತ ರಾವಣ । ನಲಘುಂತರ ವರಸಿಂಹಪೀಠದಿ ।
ಕುಳಿತನೊಡ್ಡೋಲಗದಿ ದಿತಿಜರ ಸಭೆಯ ಮಧ್ಯದಲಿ ॥ ಕಲಹದಲಿ ದೇವಾಂತ
ಕಾದಿಗ । ಳಳಿದ ವೃತ್ತಾಂತವನು ಬಂದಾ । ಖಳತಿಲಕಗರುಹಿದರು ಚಾರಕ
ರಧಿಕ ಭೀತಿಯಲಿ ॥ ೧ ॥

ರಾಗ ಮುಖಾರಿ ಏಕತಾಳ .

ಖಳರಾಯ ಲಾಲಿಸೈ ಬಿನ್ನಪವ । ಮಹಾನುಭಾವ । ಖಳರಾಯ
ಲಾಲಿಸೈ ಬಿನ್ನಪವ ॥ ಪ ॥ ಮೊದಲು ಕಳುಹಿದ ಭಟರನೆಲ್ಲ । ಸಂಗ್ರಾಮ
ದಲ್ಲಿ । ಸದೆದು ಸಾಹಸವ ತೋರ್ದರೆಲ್ಲ ॥ ಕದನಕಲಿಗಳನು । ಸದೆದಾ
ವಾನರ । ರೆದೆಗೆಡಿಸಿದರೆಂ । ಬುದು ಹರಿದುದು ಲೋ । ಕದ ಜನರಿದಿರಲಿ ।
ಸುದಯನೆ ಮುಂದ । ಭ್ಯುದಯವ ಕಾಣೆನು । ಬೆದರಿದರೆಲ್ಲ ॥ ಖಳ ॥ ೧ ॥
ಎತ್ತ ನೋಡಿದಡತ್ತ ಬಂದು । ಕಪಿಗಳ ಸೇನೆ । ಮುತ್ತಿದೆ ನಗರವ ಮತ್ತಿಂದು ॥
ಚಿತ್ತವಿಸೈ ಬಲು । ಮತ್ತ ಗಜಂಗಳ । ಮೊತ್ತವನುರೆ ಮುಂ । ದೊತ್ತುತ
ಬರುತಿರ । ಲುತ್ತಮ ಹಯಗಳ । ಪತ್ತಿ ಸಮೂಹವ । ನೊತ್ತರಿಸುತ ಸದೆ ।
ವೃತ್ತ ಗೆಲಿದರು ॥ ಖಳ ॥ ೨ ॥

ಭಾಮಿನಿ

ಪೊಡವಿಧರಸುತೆ ಕೇಳು ಚಾರರ । ನುಡಿಯ ಕೇಳುತ ರಾವಣನು
ಕೆಂ । ಗಿಡಿಗಳನು ಕಂಗಳಲಿ ಸೂಸುತ್ತೌಡನುರೆ ಕಚ್ಚಿ ॥ ಝುಡಿದು ಖಡು
ಗವ ಹೂಂಕರಿಸುತಡಿ । ಗಡಿಗೆ ವೀರಾವೇಶದಿಂದಲಿ । ಕಡೆಯ ಭೈರವನಂತೆ
ಖತಿಯನು ತಾಳುತಿಂತೆಂದ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳೆ

ಕುರಿಗೆ ಹೆಬ್ಬುಲಿಯಂಜುವುದೆ ಫಡ । ನರರು ವಾನರರಾರ್ಭಟೆಗೆ
ತಾ । ನರರೆ ಹಿಮ್ಮೆಟ್ಟುವೆನೆ ಸಾಹಸ । ಧಿರವನೀಗ ॥ ೧ ॥ ತೋರುವೆನು
ಕಪಿಕಟಕದಸುಗಳ । ಹೀರುವೆನು ಖರವೈರಿಲಕ್ಷ್ಮಣ । ರಾರುಭಟೆಗಳ
ನಿಲಿಸುವೆನು ರಣ । ಧಾರಿಣಿಯೊಳು ॥ ೨ ॥ ಇಂದು ರಾಮನ ರಣದಿ
ಕೆಡಹದೆ । ಹಿಂದು ಮುಂದಾನಾದೆನಾದಡೆ । ತಂದೆ ತಾಯಿಗಳಿಂಗೆ ಜನಿ
ಸಿದ । ಕಂದನಲ್ಲ ॥ ೩ ॥ ಎನುತ ಕೊನೆವಿಸೆಗಳ ತಿರುಹುತ । ದನುಜ
ಪತಿ ನಿಂದಿರಲು ಕಾಣು । ತ್ತನಘಮತಿಯತಿಕಾಯ ನಗುತೆಂ । ದನು
ಪಿತಂಗೆ ॥ ೪ ॥

ರಾಗ ಕಾಪಿ ಅಷ್ಟತಾಳೆ

ಏತಕೆ ಮರುಳಾಹೆ ತಾತ । ರಘು । ನಾಥನೊಳ್ ಕಲಹವೆ ಲೋಕ
ವಿಖ್ಯಾತ ॥ ಏತಕೆ ॥ ಪ ॥ ಸಕಲ ಲೋಕೈಕನಾಯಕನು । ಸರ್ವಾ ।
ತ್ಮಕನು ಸರ್ವರ ರಕ್ಷಿಸುವ ದೈವನವನು ॥ ಮುಕುತಿದಾಯಕನು ಶಾಶ್ವ
ತನು । ನಿನ್ನ । ಯುಕುತಿ ನಡೆಯದಾದಿವಸ್ತು ರಾಘವನು ॥ ಏತಕೆ ॥ ೧ ॥
ಇರಿತಕಂಬರವಳುಕುವುದೆ । ನೊರ । ಜುರುಬಿದಡಗ್ನಿಗೆ ನೋವು ತಾಗು
ವುದೆ ॥ ಇರುವೆ ಕಚ್ಚಿದರೆ ಬೆಚ್ಚುವುದೆ । ಸುರ । ಗಿರಿಯು ನಿನ್ನಥಟು
ರಾಘವನೊಳೊಪ್ಪುವುದೆ ॥ ಏತಕೆ ॥ ೨ ॥ ಕಡುಗಲಿ ಖರನೆಲ್ಲಿ ಪೋದ । ಹಿಂದೆ ।
ಅಡವಿಯೊಳ್ ವೀರಾಧಿವೀರನೇನಾದ ॥ ಬಿಡದೆ ಯೋಚಿಸಿ ನೀನೆ ನೋಡು ।
ಜಗ । ದೊಡೆಯ ರಾಮನ ಕೆಣಕಲು ಬಂತು ಕೇಡು ॥ ಏತಕೆ ॥ ೩ ॥

ಭಾಮಿನಿ

ಸೀತೆಯನು ರಘುವರನಿಗಿತ್ತನು । ಜಾತನಾದ ವಿಭೀಷಣನ ಸಂ ।
ಪ್ರೀತಿಯಲಿ ಕರೆತಂದು ರಾಜ್ಯವನಾಳುವುದು ಸುಖದಿ ॥ ನೀತಿಯೆಂದತಿ
ಕಾಯನುಸಿರಿದ । ರೀತಿಯನು ಕೇಳುತ್ತ ಕೈಕಸೆ । ಜಾತನತಿಖತಿಗೊಂಡು
ನುಡಿದನು ಮಗನಿಗುತ್ತರವ ॥ ೧ ॥

ರಾಗ ಭೈರವಿ ಏಕತಾಳೆ

ಅತಿಕಾಯನೆ ನೀ ಕೇಳು । ರಿಪು । ಮಥನಕೆ ಪೋಪಡೆ ಪೇಳು ॥
ಕಥನದ ಮಾತಂತಿರಲಿ । ಪಶು । ಪತಿಯಾಹವಕಯ್ತರಲಿ ॥ ೧ ॥ ಕೊಡೆ
ರಾಮಗೆ ಸೀತೆಯನು । ನಿಲು । ಗಡೆಯಿದು ತೊಟ್ಟ ಛಲವನು ॥ ಬಿಡು
ವವನೇ ತಾನೆಂದು । ನೆಲ । ನೊಡೆಯಲು ಕೂಗಿದನಂದು ॥ ೨ ॥

ರಾಗ ಕಾಂಭೋಜ ಝಂಪೆತಾಳೆ

ಅಹುದು ಮತ್ತೇನಾರ ಚಿತ್ತದಲಿ ಗ್ರಹಿಸಿಕೊಂ । ಡಿಹುದನವರೀ
ಬಲ್ಲರೆನುತ ॥ ಸಹಜ ವೈಷ್ಣವರೆರೆಯನತಿಕಾಯನುಬ್ಬಿ ಸ । ನ್ನಿಹಿತನಾದನು
ಸಮರಕೆಂದು ॥ ೧ ॥ ಜೀಯ ತಾ ಸಂಗರಕೆ ವೀಳೆಯವನೆನುತಲತಿ ।
ಕಾಯನುಸಿರಲ್ಕೆ ರಾಕ್ಷಸರ್‍ಕ ॥ ರಾಯನಾತನಿಗೆ ಪೊಂಬಟ್ಟಲಲಿ ವೀಳ್ಯ
ವನು । ಪ್ರೀಯದಲಿ ಕೊಟ್ಟು ಕಳುಹಿದನು ॥ ೨ ॥ ತರಿಸಿ ತುಲಸಿಯ
ದಂಡೆಗಳ ಕೊರಳೊಳಾಂತೂರ್ಧ್ವ । ವರ ತ್ರಿಪುಂಡ್ರವ ಪಣೆಗೆ ರಚಿಸಿ ॥
ಸರಸದಿಂ ಮಾತೆಯಡಿಗೆರಗಿ ಮಣಿರಥವೇರಿ । ಪೊರಟನತಿಕಾಯನಾಹವಕೆ ॥

॥ ೩ ॥ ಬನ್ನಿರೈ ಸಂಸಾರಶರಧಿಯನು ದಾಟುವರು । ಬನ್ನಿರೈ ಮೋಕ್ಷಕಾಂಕ್ಷಿಗಳು ॥ ಬನ್ನಿರೈ ಬಹಳ ಪದವಿಯನು ಬಯಸುವ ಸುಭಟ । ರೆನ್ನೊಡನೆ ನೀವೆನುತ ಕರೆದ ॥ ೪ ॥ ಈಶನಾಗುವಡೆ ಕಮಲಾಸನನ ಪದವನಾ । ಯಾಸವಿಲ್ಲದೆ ಸುಲಭದಿಂದ ॥ ಕೇಶವನ ಕೊಡುವಡೆ ಬನ್ನಿರೆನ್ನೊಡನೆಂದು । ಹೊಯ್ಸಿದನು ಡಂಗುರವನವನು ॥ ೫ ॥ ಬಳಿಕ ತತ್ತ್ವವ ತಿಳಿದು ರಾಮನೇ ಪರದೈವ । ವಳಿಯದಚಲ ಬ್ರಹ್ಮವೆಂದು ॥ ತಿಳಿದಿರ್ದ ದೈತ್ಯತತಿ ಗಜರಥಹಯಂಗಳಲಿ । ಬಳಸಿತತಿಕಾಯನನು ಬಂದು ॥ ೬ ॥

ಭಾಮಿನಿ

ದಕ್ಷನಂದನೆ ಕೇಳು ದನುಜಾ । ಧ್ಯಕ್ಷಸುತನೀ ಪರಿಯೊಳೆಲ್ಲರ । ನಾಕ್ಷಣದೊಳೊಡಗೊಂಡು ರಣಕಯ್ತರುವ ಸಂಭ್ರಮವ ॥ ಈಕ್ಷಿಸುತ ಪೌರಾಂಗನಾಜನ । ಲಕ್ಷವೊಡನೊಡನಯ್ದೆ ತವೆಮ್ಮಾಳ । ಗಕ್ಷಿಯಲಿ ನೀರೇರಿ ನುಡಿವುತ್ತಿರ್ದರಲ್ಲಲ್ಲಿ ॥ ೧ ॥

ರಾಗ ಶಂಕರಾಭರಣ ಏಕತಾಳ

ಇತ್ತ ನೋಡೆ ತಂಗಿ ರಾವ । ಣಾತ್ಮಜನತಿಕಾಯನು ದಂ । ಡೆತ್ತಿ ರಣ ಕಯ್ತರುವ ಬಹಳ । ವಿಸ್ತಾರವನ್ನು ॥ ಕೃತ್ತಿವಾಸಗರಿದು ರಾಮ । ನುತ್ತಮ ಮೋಹರವ ಪೊಗಲು । ಮತ್ತ ಹಂಸಗಮನೆ ಇವನ । ಸತ್ತ್ವವೆಂತುಟೊ ॥ ೧ ॥ ಆದರೇನೆಂಬೆನಕ್ಕ ಪು । ಣ್ಯೋದಯವ ರಾಕ್ಷಸರೊಳಿವನು । ಶ್ರೀಧರನ್ನ ಚರಣಕಮಲಾ । ರಾಧಕ ಕಾಣೆ ॥ ಪಾದಗುಟ್ಟಿ ಫಲವೇನಿನ್ನು । ಪೋದುದು ಲಂಕೆಯೈಶ್ವರ್ಯ । ಈ ದಿವ್ಯ ಪುರುಷನ ಕೂಡೆ । ನಾದಿನಿ ಕೇಳೆ ॥ ೨ ॥ ಪರರ ಹೆಣ್ಣಿಗಾಗಿ ತನ್ನ । ತರಳರನ್ನು ರಣಕೆ ನೂಕಿ । ಮೆರೆವನಲ್ಲೆ ದಶಕಂಠನು । ಹರ ಮಹಾದೇವ ॥ ಮರುಳಾದಳೇನಕ್ಕ ಮತಿ । ಪರಮ ವೈಷ್ಣವನ ತಾಯಿ । ವರ ಧಾನ್ಯಮಾಲಿನಿ ಮಗನ । ಧುರಕೆ ಕಳುಹಲ್ಕೆ ॥ ೩ ॥

ವಾರ್ಧಿಕ

ಇಂತೆಂದು ತತ್ಪುರದ ಪ್ರಮದೆಯರ್ ಸುಮದೆಯರ್ । ತಂತಮ್ಮೊಳಿರದೆ ಮಾತಾಡುತಂ ನೋಡುತಂ । ಸಂತಾಪಮಂ ತಾಳ್ದು ಸುಯ್ಯುತಂ ಬೈವುತಂ ದಶಶಿರನನಿರಲಿತ್ತಲು ॥ ಸಂತಸದೊಳತಿಕಾಯನುಬ್ಬುತಂ ಹಬ್ಬುತಂ । ಮುಂತಳೆದು ಬರುವಂತೆ ರಥದೊಳಂ ಪಥದೊಳಂ । ಕಂತು

ಪಿತನಂ ಮನದಿ ನೆನೆವುತಂ ತೊನೆವುತಂ ಬರುತಿರ್ದನಾಜಿಗೆಂದು ॥ ೧ ॥ ಕೆಲಸಾರು ಭಕ್ತಿಯ ಮಹಮೇರು ಬರುತಲಿದೆ । ಕೆಲಸಾರು ಸದ್ಧರ್ಮ ಕಲ್ಪತರು ಬರುತಲಿದೆ । ಕೆಲಸಾರು ಶ್ರೀರಾಮಚರಣಾರವಿಂದಮಧುಕರ ತಾನೆ ಬರುತಲಿದಕೊ ॥ ಕೆಲಸಾರು ಭಾಗವತಮೌಳಿಮಣಿ ಬರುತಲಿದೆ । ಕೆಲಸಾರು ದಾನವರ ಕುಲದೀಪ ಬರುತಲಿದೆ । ಕೆಲಸಾರು ಪಾಪಹುತವಾಹನತಿಕಾಯ ಬಹನೆಂದು ಕಹಳೆಗಳುಲಿದವು ॥ ೨ ॥

ರಾಗ ಭೈರವಿ ತ್ರಿವುಡೆತಾಳ

ವೀರವೈಷ್ಣವರಿರಿಯನತಿ ಮುದ । ವೇರಿ ನಾನಾ ವಾದ್ಯಘೋಷದಿ । ಘೋರ ದಾನವರೊಡನೆ ಲಂಕೆಯ । ದ್ವಾರವನು ಪೊರಮಟ್ಟು ಸಂಗರ । ಧಾರಿಣಿಗೆ ನಡೆತರೆ ಸನಂದನ । ನಾರದಾದಿ ಮುನೀಂದ್ರರಭ್ರದಿ । ಭೂರಿ ಶೌರ್ಯವ ಕಂಡು ಪೊಗಳಿದ । ರಾ ರಣದಿ ಮುಝು ಭಾಪೆನುತ್ತದ । ನೇನನೆಂಬೆ । ಸಾಹಸ । ವೇನನೆಂಬೆ ॥ ೧ ॥ ಹೊಳೆಹೊಳೆವ ಕಯ್ದುಗಳ ಕಿರಣಂ । ಗಳ ಪತಾಕಾವಳಿಯ ಮುಸುಕುವ । ಬೆಳುಗೊಡೆಯ ಚಾಮರ ಸಮೂಹದಿ । ನಿಲದೆ ಪೊಗಳುವ ಪಾಠಕರ ಕಳ । ಕಳದ ರಭಸದಿ ಘೋರ ರೂಪಿನ । ನೆಲನನಳೆದ ತ್ರಿವಿಕ್ರಮನ ವೈ । ಯಳತೆಯಲಿ ಮೈದೋರ್ದನಾ ಕಪಿ । ಬಲಕೆ ರಾವಣಸೂನು ತವಕದೊ । ಳೇನನೆಂಬೆ । ಸಾಹಸ । ವೇನನೆಂಬೆ ॥ ೨ ॥ ಭೀಮಬಲನತಿಕಾಯನಯ್ತರು । ವಾ ಮಹಾಸಂಭ್ರಮವ ಪ್ಲವಗ । ಸ್ತೋಮವಿದ ನೋಡುತ್ತ ಮನದಲಿ । ಭ್ರಾಮಕಂಪಡೆವುತ್ತಲಿವನಾ । ರೋ ಮಹಾದೇವೆಂದು ಬೆದರಿದ । ತಾಮಸಿಕೆಯಲಿ ಹರಿದುದಗಲಕೆ । ರಾಮಭಕ್ತ ಪ್ರೇಮ ನೃಪತಿ ಲ । ಲಾಮ ರಕ್ಷಿಸು ರಕ್ಷಿಸೆನುತಲಿ । ಏನನೆಂಬೆ । ಸಾಹಸ । ವೇನನೆಂಬೆ ॥ ೩ ॥

ಕಂದ

ಬೆಟ್ಟವೆ ಹರಿತಹುದೆನಲೆ । ಬ್ಬಟ್ಟಿತ ಕಪಿಬಲಪನಯ್ದೆ ಬಹ ಪಟುಭಟರಂ ॥ ನಿಟ್ಟಿಸಿ ಮನದೊಳು ಬೆರಗಂ । ಬಟ್ಟು ವಿಭೀಷಣನೊಳೆಂದನವನಿಪತಿಲಕಂ ॥ ೧ ॥

ರಾಗ ತೋಡಿ ಏಕತಾಳ

ಈತನಾರು ಪೇಳಯ್ಯ ವಿಭೀಷಣಾಂಕ ನೀನು । ಭೂತಳದೊಳಿವನ ಪೋಲ್ವರನ್ನು ಕಾಣೆ ನಾನು ॥ ಈ ತೆರದ ರಕ್ಕಸರು ನಿಮ್ಮ ಬಲದೊಳೆನಿಬರೆಂದು । ಸೀತಾರಮಣ ಕೇಳಲಾಗ ಪೇಳ್ದನಾತನಂದು ॥ ೧ ॥

ರಾಗ ಸೌರಾಷ್ಟ್ರ ಅಷ್ಟತಾಳ

ಜೀಯ ಲಾಲಿಸು ವೀರನತಿಕಾಯನೆಂಬಾತ । ನೀತ ಕಾಣ್ಯೆ । ದೈತ್ಯ । ರಾಯ ರಾವಣನೆರಡನೆಯ ಕುಮಾರಕ । ನೀತ ಕಾಣ್ಯೆ ॥ ೧ ॥ ವಾಯು ಜಾತನನಂದು ಕಟ್ಟಿದಾತನ ತಮ್ಮ । ನೀತ ಕಾಣ್ಯೆ । ಖೂಳ । ನಾಯಿಯೆಂದೆನ ಬೇಡ ಭಕ್ತರೊಳ್ ವೆಗ್ಗಳ । ನೀತ ಕಾಣ್ಯೆ ॥ ೨ ॥ ಪಾತಕನಾ ಮೇಘನಾದ ಪುಣ್ಯಾತುಮ । ನೀತ ಕಾಣ್ಯೆ । ಬಲು । ಘಾತಕನವನತಿ ನಿಷ್ಕಪಟಾಂಗನು । ಈತ ಕಾಣ್ಯೆ ॥ ೩ ॥ ಆತನ ಸರಿ ಮಿಗಿಲೆನಿಸುವ ರಣದೊಳ । ನೀತ ಕಾಣ್ಯೆ । ಹೆಚ್ಚು । ಮಾತೇನು ಮಿಕ್ಕಿನ ಗುಣದೊಳು ವೆಗ್ಗಳ । ನೀತ ಕಾಣ್ಯೆ ॥ ೪ ॥

ಕಂದ

ಎಂಬೀ ನುಡಿಯಂ ಸುಗ್ರೀ । ವಂ ಬೆರಗಿನೊಳಾಲಿಸುತ್ತಲತಿ ಸಂಭ್ರಮದಿಂ ॥ ಜಾಂಬವ ವಾಲಿಸುತಾದ್ಯರ । ನಂ ಬೇಗದಿ ಕರೆದುಸಿರ್ದನವರೊಡನಾಗಂ ॥ ೧ ॥

ರಾಗ ಮಧ್ಯಮಾವತಿ ಏಕತಾಳ

ಕೇಳಿ ವಾನರರೆಲ್ಲ ನೀವೀಗ । ಏಳಿ ರಣಕೆ ಬಂದವನೊಳತಿ ಬೇಗ ॥ ಪ ॥ ಇದುವೆ ವೇಳೆಯು ರಾಘವನ ಚಿತ್ತ ಮೆಚ್ಚಿಸು । ವುದಕೆ ಮಿಕ್ಕಿನ ಮಾತಿನಿಂದಾಹುದೇನು ॥ ಬೆದರದೆ ಬೆಚ್ಚದೆ ಕಡು ಖೂಳ ದೈತ್ಯರ । ನೊದಗಿ ಕಾಳಗದೊಳೆದೆಗೆಡಿಸುವುದೆಲ್ಲ ॥ ಕೇಳಿ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ತರಣಿಸುತನ ನುಡಿಯ ಕೇಳ್ದು । ಧುರಸಮರ್ಥ ಜಾಂಬವಂತ । ಸುರಪಜಾತನಣುಗ ನೀಲ । ಶರಭಮುಖ್ಯರು ॥ ಕರದೊಳಾಂತು ಕಲ್ಲು ಬೆಟ್ಟ । ಮರಗಳಿಂದ ಸಿಂಹನಾದ । ಮೆರಸಿ ಖತಿಯ ತಾಳಿ ಕದನ । ಕಿರದೆ ನಡೆದರು ॥ ೧ ॥ ಕಾಣುತವರ ಪೌರುಷವನು । ಕೌಣಪರ ಬಲೌಘವಂದು । ಬಾಣ ಪರಶು ಚಕ್ರವಸಿ ಕೈ । ಪಾಣ ಕುಂತದಿ ॥ ಮಾಣದೆಚ್ಚು ಕೊಚ್ಚೆ ಘಾಯ । ಕಾಣಿಸಲ್ಕೆ ಕಪಿಸಮೂಹ । ಚೂಣಿಯಲ್ಲಿ ಬೆರಸಿ ಹೊಯ್ದು । ರೀನ ನೆಂಬೆನು ॥ ೨ ॥ ಬಣಗು ಕಪಿಗಳಯ್ಯಲಾಗಿ । ಹೆಣಗಿ ಮುಂದೆ ಬರುವ ದೈತ್ಯ । ಗಣವನೀಕ್ಷಿಸುತ್ತ ವಾಲಿ । ಯಣುಗ ಮುಖ್ಯರು ॥ ಸೆಣಸುವಧಟರನ್ನು ತಡೆದ । ರಣಕವೆಮ್ಮೊಳೊಪ್ಪದೀಗ । ಲೆಣಿಸಬಹುದೆನುತ್ತ ಬಲು ಭಾ । ರಣೆಯ ಸುಭಟರು ॥ ೩ ॥ ಸೀಳಿ ಬಿಸುಟರಾನೆಗಳನು । ಕಾಲಿನಿಂದಲಶ್ವಗಳ ನಿ । ವಾಳಿ

ಸುತ್ತ ಸಂಹರಿಸುತ । ಕಾಲುಬಲವನು ॥ ತೂಳುವತಿರಥಂಗಳನ್ನು । ಹೂಳು ಗೆಯ್ದರೊಂದು ಕ್ಷಣದಿ । ಪೇಳಲೇನು ವೈರಿಬಲವ । ಧಾಳಿಗೊಂಡರು ॥ ೪ ॥ ಏನನೆಂಬೆ ದಾನವೇಂದ್ರ । ಸೂನು ಖತಿಯೊಳಂಗದಾದಿ । ವಾನರರೊಳು ಸಂಗರಕ್ಕೆ । ತಾನೆ ನಿಂದನು ॥ ಆನುವವರದಾರು ಮಿಗೆ ನ । ವೀನ ಶರಗಳಿಂದಲವರ । ಮಾನಗುಂದಿಸಿದನು ಹವದೊ । ಳಾ ನಿಶಾಟನು ॥ ೫ ॥ ಅವರ ಗೆಲಿದು ಮುಂದೆ ನೂಕು । ವವರ ಕಂಡು ಮತ್ತೆ ಕಲಿ ಜಾಂ । ಬವ ಸುಷೇಣ ಶರಭ ಮೈಂದ । ದ್ವಿವಿಧ ಸುಭಟರು ॥ ಕವಿಯಲಾಗ ಕಂಡು ಬಾಣ । ನಿವಹದಿಂದಲವರ ಗೆಲಿದು । ಜವನ ತೆರದಿ ಮುಂದುವರಿದ । ನಿವನು ತವಕದಿ ॥ ೬ ॥ ಎಕ್ಕತುಳದಿ ಮುಂದೆ ಬರುವ । ರಕ್ಕಸನನು ನೋಡಿ ಕೋಪ । ವುಕ್ಕಿ ಕಪಿಬಲೌಘವಯ್ದೆ । ಮುಕ್ಕುರಿಕಿಸಿತು ॥ ನಕ್ಕು ಮನದಿ ಕೆಡದಿರೆನುತ । ಧಿಕ್ಕರಿಸುತಲವರ ಶರದೊ । ಳೊಕ್ಕಲಿಕ್ಕಿ ಶೌರ್ಯದಿಂದ । ಮಿಕ್ಕು ನಡೆದನು ॥ ೭ ॥

ವಾರ್ಧಿಕ

ಉಡಿದು ಬಿದ್ದಿರ್ದ ಕೈಕಾಲ್ಗಳಿಂ ತೋಳ್ಗಳಿಂ । ಮಿಡುಕುತಿಹ ಕಪಿಗಣದ ರುಂಡದಿಂ ಮುಂಡದಿಂ । ದೊಡನೆ ಪರಿವರುಣ ಜಲಪೂರದಿಂ ಸಾರದಿಂ ಕುಣಿವ ಭೂತಂಗಳಿಂದ ॥ ಕೆಡೆದಿರ್ದ ಹೆಣಗಳಟ್ಟಲೆಗಳಿಂದೆಲುಗಳಿಂ । ದಿಡಿದಾಗಿ ಚೆಲ್ಲಿರ್ದ ಕರುಳ್ಗಳಿಂ ಮರುಳ್ಗಳಿಂ । ಕಡು ಭಯಂಕರವಾಗಿ ಸಂಗರಂ ಸಿಂಗರಂ ಮೆರೆದುದಾ ಕಣನೊಳಂದು ॥ ೧ ॥

ಭಾಮಿನಿ

ಅರರೆ ಯಮನುಬ್ಬಟೆಯೊ ಮೃತ್ಯುವಿ । ನುರವಣೆಯೊ ಸಂಹಾರ ಭೈರವ । ನುರುಬೆಯೋ ನಾನರಿಯೆನತಿಕಾಯನ ರಣೋತ್ಸಹವೊ ॥ ಧುರದಿ ಕಪಿಗಳನೊರಸಿ ಮುಂದ । ಯ್ತರುವ ಸುಭಟನ ಕಾಣುತಿತ್ತಲು । ವರ ವಿಭೀಷಣನೆಂದನಿನಕುಲಸಾರ್ವಭೌಮನೊಳು ॥ ೧ ॥

ರಾಗ ಪೂರ್ವಿ ಏಕತಾಳ

ಇದಕೊ ದೇವ ಬಂದನತಿಕಾಯ ನೋಡ । ಈತ । ಗಿದಿರು ನಿಲುವ ವೀರರನ್ನು ತೋರು ಗಾಢ ॥ ಮೊದಲೆ ಸೋತರಂಗದಾದಿ ಸುಭಟರೆಲ್ಲ । ರಣದಿ । ಚದುರನಿವನು ಬಣಗು ಜನಕೆ ಮಣಿವನಲ್ಲ ॥ ೧ ॥ ಇನಿತು ಮಾತಾಡುವುದ ಲಕ್ಷ್ಮಣಾಂಕನಾಗ । ಕೇಳ್ದು । ಧನುಶರಗಳ ಕೊಂಡು ರಾಮಗೆರಗಿ ಬೇಗ ॥ ಜನಪ ತನ್ನ ಸಾಹಸವನು ಪರಿಕಿಸೆಂದು । ಸಮರ । ಕನುವಾದನು ದಶಶಿರನ್ನ ಸುತನೊಳಂದು ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ಎಂದು ಸಂಗರಕೆ ಸನ್ನಹವಾದ ಸೌಮಿತ್ರಿ । ಯಂದವೀಕ್ಷಿಸಿ ರಾಮನು ॥
ಚಂದದಿಂದೆತ್ತಿ ತಕ್ಕೈಸಿ ಮುದ್ದಿಸುತಲಾ । ನಂದದೊಳಿಂತೆಂದನು ॥ ೧ ॥
ಎಲ್ಲವರಂತಲ್ಲ ಭೂರಿಪರಾಕ್ರಮ । ವುಳ್ಳವನತಿಕಾಯನು ॥ ಬಿಲ್ಲಹಿಡಿದು
ಮರ್ಮವರಿತು ಕಾದೆಂದು ಭೂ । ವಲ್ಲಭನರುಹಿದನು ॥ ೨ ॥ ಅಣ್ಣ ನೀವೇ
ಕಿನಿತೆಂಬಿರಿ ರಣದೊಳು । ಗಣ್ಯವೆ ತನಗಾತನು । ಮಣ್ಣಕೂಡಿಸುತ ಶಾಕಿನಿ
ಯರಿಗೌತಣ । ವುಣ್ಣಲು ಬಡಿಸುವೆನು ॥ ೩ ॥

ರಾಗ ಪಂತುವರಾಳಿ ಮಟ್ಟೆತಾಳ

ಬಂದನಾ ಸುಮಿತ್ರೆಯಣುಗ । ಮುಂದುವರಿವ ರಾಕ್ಷಸೇಂದ್ರ ।
ನಂದನನೊಳು ಸಮರಕೆನುತ । ಲಂದು ಬಿಲ್ಲಪಿಡಿದು ಕರದಿ ॥ ೧ ॥ ದೇವ
ತತಿಯು ಪೊಗಳೆ ಧನುವ । ಝೇವಡೆಯನು ಗೆಯ್ಯುತುಗ್ರ । ಭಾವದಿಂದಲುಬ್ಬಿ
ಸಿಂಹ । ರಾವವನ್ನು ಗೆಯ್ಯುತೊಡನೆ ॥ ೨ ॥

ಕಂದ

ಬರುವ ಸುಮಿತ್ರೆಯ ಸುತನಂ । ಹರಿವಂಶಜನೆಂಬ ಬಗೆಯನರಿತತಿ
ಕಾಯಂ ॥ ಭರದಿಂ ತನ್ನಯ ರಥಮಂ । ಹರಿಸುತಲಾಕ್ಷಣದಿ ಬಳಿಕ ವೀರ
ನೊಳೆಂದಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಳಿರೆ ಬಲು ಭಟನೆಂಬುದರಿತೆನು । ತಳುವದೆನ್ನೊಳು ಪೇಳು ರಘು
ಕುಲ । ತಿಲಕನೋ ಲಕ್ಷ್ಮಣನೊ ನೀನಾ । ರಲಸದೀಗ ॥ ೧ ॥ ಎನಲು ಲಕ್ಷ್ಮಣ
ನೆಂದ ನಿನ್ನಯ । ಮನಸಿನೊಳಗೇನೆಂದು ತೋರಿದು । ದನಿತು ಬಗೆಯಲು
ಬಹುದು ನೀ ಕೇ । ಳೆನುತಲವಗೆ ॥ ೨ ॥ ರಣಕೆ ದಾನವನಾದರೇನದ ।
ರೆಣಿಕೆ ನಮಗಿಲ್ಲೆಲವೊ ಸಮರಾಂ । ಗಣದೊಳಾತ್ಮನಿವೇದಕರು ನಾವ್ ।
ಚಿನುಮಯಂಗೆ ॥ ೩ ॥ ತೋರುವೆನು ಸುರನಿಕರ ನೋಡಲು । ಭೂರಿ ರಣ
ಕೌಶಲಗಳನು ನೀ । ವೀರನಾದಡೆ ನಿಲ್ಲೆನುತ ಖಳ । ನಾರುಭಟಿಸೆ ॥ ೪ ॥
ಒದರಿತೊಡನೇಣ್ದೆಸೆಯು ಭೂತಳ । ವದುರಿತಾ ಕಪಿಕಟಕವೆಲ್ಲವು । ಕೆದರಿ
ದುದು ಗಗನದಲಿ ಸುರತತಿ । ಬೆದರಿತಾಗ ॥ ೫ ॥

ರಾಗ ಶಂಕರಾಭರಣ ಮಟ್ಟೆತಾಳ

ಬಳಿಕಲೇನನೆಂಬೆ ಲಂಕೆಯಾಳ್ದನಣುಗನು । ಬಲು ಶರಾಳಿಯನ್ನು
ಬಿಡಲು ರಾಮನನುಜನು ॥ ತಳುವದದನು ಕೊಚ್ಚಿ ಮಗುಳೆ ರಾತ್ರಿಚರನನು ।

ಹೊಳೆವ ಕಣೆಗಳಿಂದಲೆಚ್ಚು ಹೂಂಕರಿಸಿದನು ॥ ೧ ॥ ಎಸೆದ ಬಾಣಗಳನು
ತರಿದು ಯಾತುಧಾನನು । ಉಸಿರಲೇನದಕ್ಷಯಾಸ್ತ್ರದಿಂದಲವನನು ॥ ದೆಸೆ
ಗಳೆಲ್ಲ ತೋರಬಾರದೆಂಬ ತೆರದಲಿ । ಮುಸುಕಿ ಸಿಂಹನಾದವನ್ನು ಗೆಯ್ದನಿದಿ
ರಲಿ ॥ ೨ ॥ ಗಣಿಸವದನು ವೀರ ಶತ್ರುಘ್ನನಣ್ಣನು । ಕ್ಷಣದಿ ಪ್ರತಿಶರೌಘ
ದಿಂದ ಕೊಚ್ಚಲಾತನು ॥ ಕಣೆಯುದಿದರೊಳಿವನ ಸತ್ತ್ವವೆನುತ ತೆಗೆದನು ।
ಕ್ಷಣ್ಣದಿ ಸುರರು ಬೆದರೆ ಘೋರ ವಹ್ನಿಶರವನು ॥ ೩ ॥

ರಾಗ ಮಾರವಿ ಏಕತಾಳ

ಅಗಸುತೆ ಕೇಳಾ । ಶುಗಸಖ ಶರವನು । ತೆಗೆದು ಬಿಡಲು ಧಗ ।
ಧಗಿಸುತ ಕಿಡಿಗಳ । ನುಗುಳುತ ಬಂದುದು । ರಘುಪತಿಯನುಜನ । ಹೊಗೆ
ಯಲಿ ಮುಸುಕಿತು । ಭುಗಿಭುಗಿಲೆನುತ ॥ ಏನನೆಂಬೆ ॥ ೧ ॥ ಉರಿಗೆದರಂ
ತಲ । ಯ್ತರುವ ಮಹಾಸ್ತ್ರವ । ತರಣಿಕುಲೇಂದ್ರಾ । ವರಜನು ಕಾಣುತ ।
ತ್ವರಿತದಿ ವಾರುಣ । ಶರವನು ಬಿಡಲೊಂ । ದರೆ ನಿಮಿಷದೊಳದ । ಪರಿಹರಿ
ಸಿದನು ॥ ಏನನೆಂಬೆ ॥ ೨ ॥ ತಿರುಗಿ ನಿಶಾಚರ । ನುರಗಾಸ್ತ್ರವ ಬಿಡೆ ।
ಗರುಡಕಳೆಂಬದಿ । ತರಿವುತಲದ ಬಳಿ । ಕುರು ತಿಮಿರಾಸ್ತ್ರವ । ನಿರದೆ
ತುಡುಕಲಿನ । ಶರದಲಿ ಗೆಲಿದನು । ವರ ಲಕ್ಷ್ಮಣನು ॥ ಏನನೆಂಬೆ ॥ ೩ ॥

ಭಾಮಿನಿ

ಇಂತು ಬಹುವಿಧ ಶಸ್ತ್ರಚಯವಾ । ನಂತನಂಶಜನಿರದೆ ಖಂಡಿಸ ।
ಲಂತರಂಗದೊಳೆಂದ ಗಹಗಹಿಸುತ್ತಲತಿಕಾಯ ॥ ಎಂತು ನಮ್ಮಸ್ತ್ರಗಳು
ಹರಿದಸು । ರಾಂತಕಾತ್ಮನೊಳಕಟ ಬರಿದೇ । ಭ್ರಾಂತ ತಾನೆಂದರಿತು ಮತ್ತಿಂ
ತೆಂದನವನೊಡನೆ ॥ ೧ ॥ ನೀವು ಜಗದಧಿದೈವವೆಂಬುದ । ನಾವು ಬಲ್ಲೆವು
ನಮ್ಮ ಕುಲದ ಸ್ವ । ಭಾವವನು ನಾವ್ ಬಿಡಲು ಬಹುದೇ ಪೂರ್ವಪದ್ಧತಿಯ ॥
ನಾವು ಮಾಡುವ ಸಮರಮುಖ ಸಂ । ಭಾವನೋಚಿತ ಸರಳ ಭಕ್ತಿಯ ।
ನೀವು ಕೈಗೊಳಬೇಕೆನುತ ತೆಗೆದೆಚ್ಚನತಿಕಾಯ ॥ ೨ ॥

ರಾಗ ಭೈರವಿ ಏಕತಾಳ

ಇದೆಯಾವಾಹನ ನೋಡು । ಮ । ತ್ತಿದೆಯಾಸನ ದಯೆಮಾಡು ॥
ಇದೆ ಪಾದ್ಯಾರ್ಘ್ಯಾದಿಗಳು । ಕೊ । ಳ್ಳಿದೆ ನಿನಗುಪಚಾರಗಳು ॥ ೧ ॥ ಏನು
ತೀರೆಂಟು ಶರವನು । ರಾ । ಮನ ತಮ್ಮನ ಮೇಲವನು ॥ ಘನತರ ಭಕ್ತಿ
ಯೊಳಾಗ । ಎ । ಚ್ಚನು ಕೊಳ್ಳೆನುತತಿಬೇಗ ॥ ೨ ॥ ನಿಚ್ಚಟ ಭಕ್ತಿಯೊಳವನು ।

ತೆಗೆ । ದೆಚ್ಚ ಶರವ ಲಕ್ಷ್ಮಣನು ॥ ಕೊಚ್ಚದೆ ಪ್ಮೆಯಲಿ ಧರಿಸಿ । ಮನ । ವೆಚ್ಚಿ ನುಡಿದನಂತರಿಸಿ ॥ ೩ ॥ ಅಸಮ ಭಳಿರೆ ನೀನಹುದ್ಯೆ । ರಣ । ಕುಶಲ ಯುಕುತಿ ನಿನಗೆಹುದ್ಯೆ ॥ ಅಸುರಾರಿಯ ಪದದಾಣೆ । ರಾ । ಕ್ಷಸರೊಳು ನಿನಗೆಣೆಗಾಣೆ ॥ ೪ ॥ ಎಂದಾ ದಶರಥಸುತನು । ಶರ । ವೃಂದದಿ ಮುಸುಕ ಲಸುರನು ॥ ಒಂದು ನಿಮಿಷ ಮೂರ್ಛೆಯೊಳು । ಪ್ಮೆ । ನೊಂದೊರಗಿದ ನಾಚೆಯೊಳು ॥ ೫ ॥

ಕಂದ

ಬಳಿಕಂ ಪ್ಮೆಮುರಿದೆದ್ದಾ । ಖಳಕುಲಚಂದಿರನ ಕುವರ ದೃಢಚಿತ್ತ ದೊಳಂ ॥ ಜಲರುಹನಾಭನ ಪದಯುಗ । ನಳಿನವ ನೆನೆವುತ್ತಲೊಯ್ಯ ನೆಂದನು ತನ್ನೊಳ್ ॥ ೧ ॥

ರಾಗ ಕಾಂಭೋಜ ಝಂಪೆತಾಳ

ನರರಿಗೀ ಬಲುಹೆಲ್ಲಿಯದು ವಿಪಿನ ಚರರಿಗೀ । ಪರಿಯ ಕಡುಹೆಲಿ ಬಂದಪುದು ॥ ಹರಿಯ ಮಾಯಾವಿಲಾಸವಿದಲ್ಲದೊಂದಿಲ್ಲ । ಮರೆಯ ಮಾತೇನು ದಿಟವ್ಮೆಸೆ ॥ ೧ ॥ ಆಯಿಂತಕಟಾ ತಂದೆಯಾಯುಷಕೆ ಕಡೆಯಿನ್ನು। ಬಾಯಾರಲೇಕೆ ನಾವಿದಕೆ ॥ ಕಾಯವಿದ್ದಾಗ ನಾರಾಯಣನ ಪಾದವನು । ಪ್ರೀಯದಿಂ ಸ್ಮರಿಸಬೇಕೆಂದ ॥ ೨ ॥ ಎಂದು ಹೃತ್ಕಮಲಕರ್ಣಿಕೆಯ ಮಧ್ಯ ದಲಿ ರಘು । ನಂದನನ ಚಾರುಮೂರ್ತಿಯನು ॥ ಚಂದದಿಂದಿರಿಸಿ ನಾಲಿಗೆ ಕೊನೆಯೊಳಾಗ ಜಯ । ವೆಂದು ಸ್ತುತಿಗೆಯ್ದನಚ್ಯುತನ ॥ ೩ ॥

ವಾರ್ಧಿಕ

ಜಯ ಜನಕಜಾರಮಣ ವಂದಿತಜನೋದ್ಧರಣ । ಜಯ ಜಯ ಘನ ಶ್ಯಾಮ ರಘುಕುಲಾರ್ಣವಸೋಮ । ಜಯ ಸಿತಾಂಬುಜನೇತ್ರ ಸುರನಿಕರ ನುತಿಪಾತ್ರ ಜಯ ಜಯ ಗಿರೀಶಮಿತ್ರ ॥ ಜಯ ಮುನಿಮನೋಹಂಸ ದಾನವ ಕುಲಧ್ವಂಸ । ಜಯ ಜಯ ಚಿದಾನಂದ ಸಕಲ ಸದ್ಗುಣವೃಂದ । ಜಯ ದುರಿತವನದಾವ ದೇವಾದಿದೇವ ಜಯ ಜಯ ನಮೋ ಜಯತೆಂದನು ॥ ೧ ॥

ಕಂದ

ಇಂತತಿಕಾಯಂ ರಾಘವ । ನಂ ತನ್ನಯ ಜಿಹ್ವೆಯೊಳಗೆ ಸಂಸ್ತುತಿ ಸುತ್ತಂ ॥ ಮುಂತಿಹ ಲಕ್ಷ್ಮಣದೇವನೊ । ಳಂ ತವೆ ಸಂತಸದೊಳೊರೆದನತಿ ಘರ್ಜಿಸುತಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತಡೆವುದೇತಕೊ ವೀರ ಬೇಗದಿ । ತೊಡು ಮಹಾ ಬ್ರಹ್ಮಾಸ್ತ್ರವನು ಜಗ । ದೊಡೆಯ ರಾಮನ ಪದವ ಕೊಡುವೆ । ದೃಢದೊಳೀಗ ॥ ೧ ॥ ಎಂದು ಬೊಬ್ಬಿರಿದಾ ದಶಾಸ್ಯನ । ನಂದನನು ತೆಗೆದೆಚ್ಚನಮರರ । ವೃಂದ ಕಂಪಿಸಲಾ ಸುಮಿತ್ರೆಯ । ಕಂದಗಂದು ॥ ೨ ॥ ಎಚ್ಚ ಶರವನು ಕೊಚ್ಚಿ ಸುರತತಿ । ಮೆಚ್ಚಲಾ ಲಕ್ಷ್ಮಣನು ತೆಗೆದನು । ನಿಕ್ಕಟದಿ ಚತುರಾಸ್ಯ ಬಾಣವ। ಚಚ್ಚರದೊಳು ॥ ೩ ॥ ಮನದಿ ರಾಮನ ನೆನೆದು ಭಾರಿಯ । ಧನುವಿಗಾ ಬಾಣವನು ಹವಣಿಸಿ । ತೊನದು ಕಿವಿವರೆಗೆಳೆದುಬಿಟ್ಟನು । ಕನಲುತಂದು ॥ ೪ ॥ ಕಿಡಿಯನುಗುಳುತಲಾ ಮಹಾಸ್ತ್ರವು । ತಡೆಯದಯ್ತಂದಾ ನಿಶಾ ಟನ । ತುಡುಕಿ ಕೊರಳನು ಕಚ್ಚಿ ಬಾಂದಳ । ಕಡರಿತೊಡನೆ ॥ ೫ ॥

ರಾಗ ಸಾಂಗತ್ಯ ರೂಪಕತಾಳ

ಹರಿ ನಾರಾಯಣ ಕೃಷ್ಣ ಗೋವಿಂದ ರಾಮ ಪೆಂ । ಕರುಹಲೋಚನ ಶರಣೆನುತ ॥ ಶರಮುಖದಲಿ ಕಡಿವಡೆದಡರಿದುದಾಗ । ಶಿರವು ಬಾಂದಳದಿ ರಾಕ್ಷಸನ ॥ ೧ ॥ ಅಡಗಿದುದೊಡನಾತ್ಮಜ್ಯೋತಿಯು ರವಿಬಿಂಬ । ದೆಡೆ ಯೊಳು ಕಳಕಳಿಸುತಲಿ ॥ ಜಡಜಸಂಭವ ಪುರುಹೂತಾದಿ ಸುರತತಿ । ಕಡು ಬೆರಗಾಗಲಾಕ್ಷಣದಿ ॥ ೨ ॥ ಅರಳಿದ ಕಮಲವ ಕಂಡು ಸನ್ನೋಹದೊ । ಳೆರಗುವ ಭ್ರಮರದಂದದಲಿ ॥ ಸಿರಿರಾಮನಂಘ್ರಿಯ ಮೇಲೆ ಬಿದ್ದುದು ಶಿರ । ವಿರದೆ ಬಾಂದಳದಿಂದ ಬಳಿಕ ॥ ೩ ॥ ಹೊಳೆವ ಕುಂಡಲದ ಝಾಳಿಪ ಕದಪಿನ ಥಳ । ಥಳಿಸುವ ನೊಸಲ ಕಸ್ತುರಿಯ ॥ ಸಲೆವೀರರಸಗೂಡಿ ನಗು ಮೊಗದಿಂದಿಹ । ತಲೆಯೆಸೆದುದು ಕಣನೊಳಗೆ ॥ ೪ ॥ ಉಳಿದ ರಾಕ್ಷಸರು ಲಕ್ಷ್ಮಣದೇವನೊಳು ಕಾದಿ । ತಳುವದೆ ದಿವವನಯ್ದಿದರು ॥ ಬಳಿಕಮರರು ಕರೆದರು ಪುಷ್ಪವೃಷ್ಟಿಯ । ನೊಲಿದು ಸೌಮಿತ್ರಿಯ ಮೇಲೆ ॥ ೫ ॥

ಭಾಮಿನಿ

ಅರಸಿ ಕೇಳ್ ಬಳಿಕಾ ನಿಶಾಟನ । ಶಿರವು ಧರೆಯಲಿ ಬೀಳೆ ಕಂಡದ । ನೆರದು ಕಯ್ಮುಂದೆತ್ತಿ ಮುದ್ದಿಸುತಲೆ ವಿಭೀಷಣನು ॥ ತರಳ ಹಾ ಸುಕು ಮಾರ ಸದ್ಗುಣ । ಶರಧಿ ಹಾ ಹಾಯೆನುತ ಕಂಬನಿ । ಗರೆದು ಮಮ್ಮಲ ಮರುಗಿದನು ಘನತರದ ದುಃಖದಲಿ ॥ ೧ ॥

ರಾಗ ನೀಲಾಂಬರಿ ಝಂಪೆತಾಳ

ಹಾ ಕುಮಾರಕ ಸಮರಶೂರ । ಸಚ್ಚರಿತ । ಶ್ರೀಕಾಂತಭಕ್ತ ಶರನಿಧಿಸಮಗಭೀರ ॥ ಲೋಕ ಮೂರರೊಳು ನಿನಗೆಣೆಯೆ । ರಾಕ್ಷಸ । ನೀಕದೊಳಗೆನ್ನ ಸನ್ಮೋಹದ ಕಣಿಯೆ ॥ ಹಾ ॥ ೧ ॥ ಪರನಾರಿಯರಿಗಾಗಿ ನಿನ್ನ। ಕೊಲಿಸಿದನು । ದುರುಳ ದಶಕಂಠನೆಲೆ ಸುಗುಣಸಂಪನ್ನ ॥ ಬರದೇಕೆ ಬುದ್ಧಿಯವಗಿನ್ನು । ಸೀತೆಯನು । ಸಿರಿರಾಮಗಿತ್ತು ಸುಖವಿರಲು ಕಂದೇನು ॥ ಹಾ ॥ ೨ ॥ ಚಾರುಚಂದಿರನಿರದ ಬಳಿಕಾ । ಬಾಂದಳದಿ । ತಾರಕೆಯ ಬೆಳಕಿಂದ ಬೆಳಗುವುದೆ ಲೋಕ ॥ ಯಾರು ಬದುಕಿರ್ದು ಫಲವೇನು । ನೀನಳಿಯೆ । ತೀರಿತೆಮ್ಮಾಯುಷ್ಯ ರಿಪುತಿಮಿರಭಾನು ॥ ಹಾ ॥ ೩ ॥

ಭಾಮಿನಿ

ಇಂತು ದುಃಖಸುವಾ ವಿಭೀಷಣ । ನಂತರಂಗವ ತಿಳಿದು ಬರಿದೇ । ಭ್ರಾಂತಿಯೇಕೆ ಹುಟ್ಟಿದವರಿಗೆ ಮರಣ ತಪ್ಪುವುದೆ ॥ ಚಿಂತಿಸಿದಡೇನಹುದು ಜಗದಾ । ದ್ಯಂತವೆಲ್ಲವು ಕಾಲವಶವದ । ನೆಂತು ಮೀರಲು ಬಹುದೆನುತ್ತೊಡಬಡಿಸಿದನು ರಾಮ ॥ ೧ ॥

ರಾಗ ಜಿಲಹರಿ ಏಕತಾಳ

ಅತಿಕಾಯನಳಿದುದ ಕಂಡು ಮತ್ತವನ ಸಾ । ರಥಿಯು ದುಃಖದಿ ಹೊರಳುತ್ತ ಚಿಂತೆಯಲಿ ॥ ರಥವನು ತಿರುಹಿಸಿಕೊಂಡು ಲಂಕೆಗೆ ಪೋಪ । ಪಥವ ಮೆಟ್ಟಿದನೆಡಬಲವ ನೋಡುತಲೆ ॥ ೧ ॥ ಕುವರನೇನಾದನೆನ್ನುತ ಧಾನ್ಯಮಾಲಿನಿ । ತವಕಿಸಿ ಕೇಳಿದರೇನ ಪೇಳುವೆನು ॥ ಅವಳ ಮಾತಿರಲಿ ದಶಾನನಗೇನೆಂದು । ವಿವರಿಸಲೆನುತ ತನ್ನಲಿ ಮರುಗಿದನು ॥ ೨ ॥ ತೊಳಲುತ ಬಳಲುತ ರಥವನು ನಡೆಸುತ । ಒಳಪೊಕ್ಕನಾ ಪುರವರದ ದುರ್ಗವನು ॥ ಇಳಿವ ಕಂಬನಿಯಿಂದ ಬಂದನೊಯ್ಯನೆ ರಾಜ । ನಿಳಯದೆಡೆಗೆ ತಲೆಮುಸುಕಿನೊಳವನು ॥ ೩ ॥

ಕಂದ

ದುಗುಡದಿ ಬಹ ಸಾರಥಿಯಂ । ಮಿಗೆ ಕಾಣುತ್ತೊಡನೆ ಧಾನ್ಯಮಾಲಿನಿಯಾಗಳ್ ॥ ಮಗನಾವೆಡೆ ತೋರೆನುತಂ । ದೃಗುಯುಗದೊಳ್ ಜಲವ ಸೂಸುತೊಯ್ಯನೆ ನುಡಿದಳ್ ॥ ೧ ॥

ರಾಗ ರೇಗುಪ್ತಿ ಆದಿತಾಳ

ಬಾಲನೆಲ್ಲಿಗೆ ಪೋದನ್ನೆ । ಎನ್ನಯ ಚಾರು । ಶೀಲ ತಾನೇನಾದನ್ನೆ ॥

ತಾಳಲಾರೆನು ಕಾಣದೆಂತಾದನೆಂಬುದ । ಪೇಳು ಸಾರಥಿಯೆ ನೀನು ॥ ಕೈಮುಗಿವೆನು ॥ ೧ ॥ ರಥವೇಕೆ ಬರಿದಾದುದು । ನಿನ್ನನು ನೋಡೆ । ಅತಿದುಃಖ ಪುಟ್ಟುವುದು ॥ ಪಥದಲ್ಲಿ ಬಿಟ್ಟು ಬಂದೆಯೊ ಕರೆತಂದೆಯೊ । ಕೃತಕಬೇರುಂಟೆ ಪೇಳು ॥ ಶೀಘ್ರದೊಳು ॥ ೨ ॥ ಅಳಲಿಸಲೇಕೆಯೆನ್ನನು । ಸುಮ್ಮನೆ ಹೆಚ್ಚು । ಬಳಲಿಪ ಕಾರ್ಯವೇನು ॥ ಅಳಿದನೊ ಸಮರದೊಳುಳಿದನೊ ತಾನದ । ನಳುಕದೆ ಕೇಳುವೆನು ॥ ನಿನ್ನೊಳು ನಾನು ॥ ೩ ॥

ಭಾಮಿನಿ

ಎಂದು ಕೇಳಲು ಮರುನುಡಿಯ ಕೊಡ । ದಂದು ಸಾರಥಿ ಮರುಗುತಿರೆ ಕಂ । ಡಿಂದುಮುಖಿ ತಿಳಿದಳು ಕುಮಾರಕನಳಿದನೆಂಬುದನು ॥ ನಿಂದವಳು ಸಿಡಿಲೆರಗಿದಂದದಿ । ನೊಂದು ಧೊಪ್ಪನೆ ಕೆಡೆದು ಧರೆಯಲಿ । ಕಂದ ಮಡಿದ್ಯೆ ಹಾಯೆನುತ ಹಮ್ಮೈಸಿ ಮರುಗಿದಳು ॥ ೧ ॥

ರಾಗ ನವರೋಜು ಆದಿತಾಳ

ಹಾ ಮಗನೇ ಗುಣವೃಂದ । ಆ । ಯ್ಯೋ ಮಗನೇ ಮನದಂದ ॥ ಹೇ ಮಗನೇ ರಣಧೀರ । ಬಾ ಮಗನೇ ಮೊಗದೋರ ॥ ೧ ॥ ನೋಡುವ ಕಣ್ಣಿಗೆ ಮಣ್ಣು । ಮಾಡಿದೆಯಲ್ಲವೆ ಚಿಣ್ಣ ॥ ಆಡಿಸಿದೀ ಕೈಗಳಿಗೆ । ಕೇಡನು ಕೊಟ್ಟೆಯೊ ಹೀಗೆ ॥ ೨ ॥ ಶೋಕಮಹಾಬ್ಧಿಯೊಳೆನ್ನ । ನೂಕಿದೆಯಾ ಗುಣರನ್ನ ॥ ಸಾಕಿದಕ್ಕುಪಕಾರ । ಸಾಕಯ್ಯಾ ಸುಕುಮಾರ ॥ ೩ ॥

ರಾಗ ಆನಂದಭೈರವಿ ಏಕತಾಳ

ಇಂತೆಂದು ಕಾಮಿನಿಯು ಮ । ಹಾಂತ ದುಃಖದಿಂದ ಮಿಡು । ಮಿಡುಕುತ್ತ । ನೆಲದಿ । ಹೊಡಕುತ್ತ ॥ ೧ ॥ ಮರುಗಲೇತಕಮ್ಮ ಎಂದು । ಸುರಿವ ಕಣ್ಣೀರನು ಬಂದು । ತೊಡೆಯದೆ । ಒಂದು । ನುಡಿಯದೆ ॥ ೨ ॥ ಹೊಟ್ಟೆಯ ಮೇಲೆ ಕಲ್ಲಿಟ್ಟು । ಬಿಟ್ಟುಹೋದೆಯಲ್ಲ ಕಂದ । ಎಂದಳು । ಹಲುಬಿ । ನೊಂದಳು ॥ ೩ ॥

ಭಾಮಿನಿ

ಮಾನಿನಿಯ ಹುಯ್ಯಲನು ಕೇಳ್ದು ದ । ಶಾನನನು ನಡೆತಂದನಲ್ಲಿಗಿ । ದೇನಿದೇನೆಂದೆನುತ ತವಕದಿ ಬಿಟ್ಟ ಮುಂಡೆಯಲಿ ॥ ದಾನವೇಂದ್ರನನೀಕ್ಷಿಸುತ ಬಳಿ । ಕಾ ನಿತಂಬಿನಿ ಪುತ್ರಶೋಕವ । ನಾನಲಾರದೆ ಹಲುಬಿದಳು ತತ್ಕಾಂತ ನಿದಿರಿನಲಿ ॥ ೧ ॥

ರಾಗ ನೀಲಾಂಬರಿ ಏಕತಾಳೆ

ಚಿಣ್ಣನ ಕಳುಹಿದಿರೆ । ಹಬ್ಬವನೆನ್ನ । ಕಣ್ಣಿಗೆ ಮಾಡಿದಿರೆ ॥ ಎಣ್ಣಿದ
ಬಯಕೆ ತೀರ್ದುದೆ । ಹಾಲ ಕೊಂಡಂತೆ । ತಣ್ಣಗೆ ಹೊಟ್ಟೆಗಾದುದೆ ॥ ೧ ॥
ಪರರ ಹೆಂಗಸನು ತಂದು । ಎನ್ನಯ ಮಗನ । ಹರಿಬವ ಕಂಡಿರಿಂದು ॥
ಅರಿಗಳ ದೂರಲೇಕೆ । ಕಂದಗೆ ಮೃತ್ಯು । ಪರಿಯಲು ನೀವೆ ಪರಾಕೆ ॥ ೨ ॥
ತರಳನು ಮಡಿದ ಮೇಲೆ । ಜೀವಿಸುವುದು । ಸರಿಯಲ್ಲ ತನಗೀಗಲೆ ॥
ಮರಣಕ್ಕೆ ನೇಮವನು । ಕೊಡಿಸಯ್ಯ ಬೇಗ । ಇರಲಾರೆ ಬಾಳಿ ನಾನು ॥ ೩ ॥

ಭಾಮಿನಿ

ಕೇಳು ಗಿರಿಸುತೆ ಸತಿಯ ನುಡಿ ಕೇ । ಳ್ದಾಲಿಯಲಿ ಕಿಡಿಗಳನು
ಸೂಸುತ । ತಾಳಿ ಕೋಪವ ಸಿಡಲಿನಂದದಿ ಘರ್ಜಿಸುತ ಖಳನು ॥ ಪೇಳು
ಸಾರಥಿ ಮಗನ ಮಡುಹಿದ । ಖೂಳನಾವವನವನನೀಗಳೆ । ಬೀಳುಗಡಿವೆನು
ರಣದೊಳೆನಲಿಂತೆಂದನಾ ಸೂತ ॥ ೧ ॥

ರಾಗ ತುಜಾವಂತು ಝಂಪೆತಾಳ

ಲಾಲಿಸೈ ಪುಣ್ಯಜನಕುಲಸಾರ್ವಭೌಮ । ಪೇಳಲಿನ್ನೇನದನು ಸಮರ
ನಿಸ್ಸೀಮ ॥ ಪ ॥ ಏನನೆಂಬೆನು ನಿನ್ನ ಸೂನುವಿನ ಸಾಹಸವ । ವಾನರ
ಮಹಾಬಲವ ಮೊದಲು ಪೊಕ್ಕು ॥ ಆನೆಗಳ ಹಿಂಡ ಪಂಚಾನನನು ಪೊಗು
ವಂತೆ । ಹಾನಿಗೆಯ್ದನು ಬಹಳ ಕರಡಿ ಕಪಿಗಳನು ॥ ೧ ॥ ರವಿತನಯ ನೀಲ
ಜಾಂಬವ ವಾಲಿಸುತ ಮೈಂದ । ದ್ವಿವಿದ ಮೊದಲಾದ ಪಟುಭಟರನೆಲ್ಲ ॥
ಬವರದೊಳು ಗೆಲಿದು ಲಕ್ಷ್ಮಣಗೆ ತಾನಿದಿರಾಗಿ । ತವಕದಿಂ ಹಳಚಿದನು
ಸುರರು ಭಾಪೆನಲು ॥ ೨ ॥ ನಡನಡಗುತಿದೆ ಮುಂದೆ ನಡೆದ ವೃತ್ತಾಂತವನು ।
ನುಡಿವೆನೆಂದರೆ ಎನ್ನ ಕೈಕಾಲ್ಗಳು ॥ ಮಡುಹಿದನು ಬಳಿಕ ನಿನ್ನೊಡಲಾಬಿ
ಚಂದ್ರಮನ । ಜಡಜಸಂಭವಬಾಣದಿಂದ ಲಕ್ಷ್ಮಣನು ॥ ೩ ॥

ಕಂದ

ಎಂದಾ ಸೂತನ ನುಡಿ ಕೇ । ಳ್ದಂದಾ ದಿತಿಜಾತರೆರೆಯ ಕೋಪವ
ತಾಳ್ದಿಂ ॥ ಮುಂದಿಹ ಸತಿಯಂ ಕಂಡಿಂ । ತೆಂದನು ಶೋಕವನು ತೋರೆವು
ದೆನುತೀ ತೆರದಿಂ ॥ ೧ ॥

ರಾಗ ಮಾರವಿ ಏಕತಾಳ

ಬಿಡು ಬಿಡು ಶೋಕವ । ನುಡುರಾಜಾನನೆ । ನುಡಿಯದಿರಿನ್ನಿದನು ॥
ತಡೆಯದೆ ಕಂದನ । ಮಡುಹಿದವನ ರಣ । ದೆಡೆಯೊಳು ಮಲಗಿಸುವೆ ॥ ೧ ॥

ಮಂಗ ಕರಡಿ ಮನುಜ । ಸಿಂಗಲಿಕಗಳಿಗೆ । ಕಂಗೆಡುವೆನೆ ನಾನು ॥
ಅಂಗನೆ ಕೇಳ್ ಸಮ । ರಾಂಗಣದೊಳಗೆ । ನ್ನಂಘವಣೆಯ ತೋರ್ಪೆ ॥
॥ ೨ ॥ ಹುಲು ಮಾನವರ । ಗ್ಗಳಿಕೆಯ ನಿಮಿಷದಿ । ನಿಲಿಸುವೆ ಮೃಗನೇತ್ರೆ ॥
ಕಲಕುವೆ ರಿಪುಬಲ । ಜಲಧಿಯನೆಂದೆನು । ತಲೆ ಪೇಳ್ದನು ಸತಿಗೆ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತು ದಶಶಿರನೈದೆ ತನ್ನಯ । ಕಾಂತೆಯಳನೊಡಬಡಿಸಿ ರೌದ್ರವ ।
ನಾಂತು ಸನ್ನಹವಾದ ಧುರಕಿ । ನ್ನೆಂತು ಪೊಗಳ್ವೆ ॥ ೧ ॥ ಹತ್ತು ತಲೆಗೆ
ಕಿರೀಟಗಳ ಧರಿ । ಸುತ್ತ ಮಣಿಮಯ ಕುಂಡಲವನಿ । ಪ್ರತ್ತು ಕಿವಿಯಲಿ
ಹಾಕಿದನು ಮುದ । ವೆತ್ತು ಖಳನು ॥ ೨ ॥ ಲೇಸೆನಿಪ ಚಂದನವ ಮೈ
ಯಲಿ । ಪೂಸಿ ತಿಲಕವನಿಟ್ಟು ರಕ್ಕಸ । ದೇಶಿಗನು ನೆರಿದುಟ್ಟನರುಣ ಸು ।
ವಾಸವನ್ನು ॥ ೩ ॥ ನಾರಿಯರ ಜಯಸೇಸೆಯನು ರಣ । ಧೀರ ಕೈಗೊಂ
ಡೊಡನೆ ಮಿಸುನಿಯ । ತೇರನೇರುತ ಪೊರಟನತಿ ಗಂ । ಭೀರತೆಯೊಳು ॥ ೪ ॥

ರಾಗ ಆಹೇರಿ ಝಂಪೆತಾಳ

ಕೊಳುಗುಳಕೆ ಭರದೊಳಯ್ತಂದ । ಚಾತು । ರ್ಬಲವೆರಸಿ ದಶಕಂಠ
ನಧಿಕ ಖತಿಯಿಂದ ॥ ಪ ॥ ಎಡಬಲದಿ ಜಯ ಜಯ ನಿನಾದದಲಿ । ಮುಂದ
ದೊಳಡಿ । ಗಡಿಗೆ ಪೊಗಳುತ್ತಿರುವ ಪಾಠಕರ ಬೊಬ್ಬೆಯಲಿ ॥ ಹೊಡೆವ ರಣ
ಭೇರಿ ತಂಬಟೆ ಡಕ್ಕೆ ಹಲಗೆ ಗಡಿ । ಬಿಡಿ ಎಂಬ ವಾದ್ಯಗಳ ರವದಿ ॥ ಪೊಡವಿ ।
ನಡುಗೆ ಕುಲಗಿರಿಗಳಲ್ಲಾಡೆ ಬಲು ಭಯದಿ ॥ ೧ ॥ ಹರಿಗೆ ಪಟ್ಟಿಸ ಶೂಲ
ಖಡ್ಗ ಶಲ್ಲೆಹ ಶಕ್ತಿ । ಪರಶು ಚಕ್ರ ಮುಸುಂಡಿ ಪಿಂಡಿವಾಳ ಕೃಪಾಣ ॥
ಸುರಗಿ ತೋಮರ ವಜ್ರ ಮೊದಲಾದ ಕೈದುಗಳ । ಧರಿಸಿ ಚತುರಂಗ ಬಲ
ಸಹಿತ । ರಕ್ಕ । ಸರ ಪಡೆಯನೊಡಗೂಡುತಂದು ಘರ್ಜಿಸುತ ॥ ೨ ॥

ರಾಗ ಪಂಚಾಗತಿ ಮಟ್ಟೆತಾಳ

ತರುಣಿ ಕೇಳು ದೈತ್ಯಪತಿಯ । ವರ ಚತುರ್ಬಲಂಗಳಾಗ । ಮುರಿದು
ರಾಮಸೈನಿಕವನು । ಭರದಿ ಪೊಕ್ಕುದು ॥ ಮರಳಿ ಕಪಿಗಳುಬ್ಬಿ ಗುಂಡು ।
ಪೊರಡಿ ಹೆಮ್ಮರಂಗಳಿಂದ । ತೆರಳಿ ಕವಿವ ರಾಕ್ಷಸರನು । ಬೆರಸಿ ಹೊಯ್ದರು ॥
॥ ೧ ॥ ಎಲೆಲೆ ಕವಿಯೆನುತ್ತ ಸರಳ । ಮಳೆಗಳನ್ನು ಕರೆವುತಾಗ । ಖಳರು
ಖಾತಿವೆತ್ತು ವೈರಿ । ಬಲವ ಪೊಕ್ಕರು ॥ ಕಿಲಕಿಲಾರವಂಗಳಿಂದ । ಕಲು
ಮರಂಗಳಲ್ಲಿ ಬಡೆದು । ನಿಲುಕಿ ಬಾಲದಿಂದ ಪೊಯ್ದು । ರಲಘು ಕಪಿಗಳು ॥

॥ ೨ ॥ ಒತ್ತಿ ಬರುವ ರಥವ ರಥದಿ । ಮತ್ತಗಜವ ಗಜದಿ ಹಯವ । ನೆತ್ತಿ ಹಯದಿ ಪತ್ತಿಯನ್ನು । ಪತ್ತಿಯಿಂದಲಿ ॥ ಸುತ್ತಿ ಚೆಲ್ಲಬಡಿದರಸಮ । ಸತ್ತ್ವದಿಂದ ಕಪಿಗಳೆಲ್ಲ । ಬಿತ್ತರಿಸುವದೇನನದನು । ಮತ್ತಕಾಶಿನಿ ॥ ೩ ॥ ಮಡಿದ ಚಾತುರಂಗ ಬಲವ । ನೊಡನೆ ಕಾಣುತಸುರಪತಿಯು । ಮಿಡುಕಿ ಕೋಪದಿಂದ ಹೊಯ್ದ । ತಡೆಯುದೆಲ್ಲರ ॥ ಫಡ ಫಡೆನುತಲಾಗ ಬಾಣ । ಗಡಣದಿಂದ ಮುಸುಕುತವರ । ಪೊಡವಿಗೊರಗಿಸಿದ ಸುರಾಳಿ । ನಡುಗದಿರದೆನೆ ॥ ೪ ॥

ವಾರ್ಧಿಕ

ಅಸಮ ಸಾಹಸರನ್ನು ಮೆಟ್ಟಿದಂ ಕುಟ್ಟಿದಂ । ವಿಶಿಖವರುಷವನ್ನೆದೆ ವಿಸಾರಿದಂ ತೋರಿದಂ । ಕುಶಲಗತಿಯಿಂ ಧರೆಗೆ ಕೆಡಹಿದಂ ಮಡುಹಿದಂ ಪರಬಲದ ಪಟುಭಟರನು ॥ ಮುಸುಕುತಿಹ ಕಪಿಗಳಂ ಚುಚ್ಚಿದಂ ಕೊಚ್ಚಿದಂ । ಪೆಸರಾಂತ ಭಟರ ಸಂಹರಿಸಿದಂ ಕರಿಸಿದಂ । ಪೊಸ ರಥವನುಂ ಮುಂದೆ ನೂಕಿದಂ ತೇಕಿದಂ ದಶಶಿರಂ ಸಂಗರದೊಳು ॥ ೧ ॥

ಕಂದ

ಮುಂದೆಸೆಯೊಳು ಬಪ್ಪಾ ದಶ । ಕಂಧರನಂ ಪರಿಕಿಸುತ್ತಲಾ ಕಪಿ ಶ್ರೇಷ್ಠಂ ॥ ಬಂದಾ ರಕ್ಕಸನಿದಿರೊಳ್ । ಸಿಂದುರುತರ ಸಿಂಹನಾದ ಗೆಯ್ದಿಂತೆಂದಂ ॥ ೧ ॥

ರಾಗ ಭೈರವಿ ಏಕತಾಳ

ದಶಕಂಠನಹುದೊ ನೀನು । ನಿನ್ನಧಟನು । ದೆಸೆಗೆಡಿಸಲು ಬಂದೆನು ॥ ಅಸಮ ಸತ್ತ್ವವ ತೋರು ತೋರೆಂದು ಕಲುಮರ । ವಿಸರದಿ ಮುಸುಕಿದನು ॥ ॥ ೧ ॥ ಬಿಡದಾ ಕಲ್ಮರಗಳನು । ಬಾಣದಿ ತರಿ । ದೊಡನೆ ದಶಾನನನು ॥ ಕಡು ಕೋಪದಿಂದ ಚಾಪಕೆ ಶರವನು ಪೂಡಿ । ನುಡಿದನಾತನೊಳವನು ॥ ॥ ೨ ॥ ಎಂದು ಲಂಕೇಶ್ವರನು । ತೀವ್ರದಿ ಬಿಡ । ಲಂದು ಭಾಸ್ಕರಸುತನು ॥ ಒಂದರೆಘಳಿಗೆ ಮೂರ್ಛೆಯನಾಂತು ಬಳಿಕೆದ್ದು । ನಿಂದು ಬೊಬ್ಬಿರಿದೆಂದನು ॥ ॥ ೩ ॥ ಬಲು ಧೀರನಹೆಯೊ ನೀನು । ಅಂಗದನ ತೊ । ಟ್ಟಿಲೊಳು ಕಟ್ಟೊಡದವನು ॥ ಭಳಿರೆ ಬಲ್ಲೆನು ನಿನ್ನ ಸತ್ತ್ವವನೆನುತಲಿ । ಕಲುಮರದಲಿ ಪೊಯ್ದನು ॥ ೪ ॥ ಕ್ರೋಧದಿ ರಾವಣನು । ಮತ್ತದನೆಲ್ಲ । ಛೇದಿಸಿ ರವಿಜನನು ॥ ಆದರೀ ಬಾಣವನಾಂತು ಕೊಳ್ಳೆನುತಲಿ । ಮೂದಲಿಸುತಲೆಚ್ಚನು ॥ ೫ ॥

ಭಾಮಿನಿ

ಬಾಣಹತಿಯಲಿ ಬಸವಳಿದು ಮಿಗೆ । ತ್ರಾಣ ಗುಂದಿ ದಿನೇಶತನಯನು । ಕ್ಷೋಣಿಯಲಿ ಮತಿಗೆಟ್ಟು ಮಲಗಿದನಂದು ಮೂರ್ಛೆಯಲಿ ॥ ಕಾಣುತದನಂಗದನು ಖತಿಯಲಿ । ಹೂಣಿಗರ ಹೊಯ್ದೊರಸಿ ದಿವಿಜ । ಶ್ರೇಣಿಯನು ಬೆಚ್ಚಿಸುವೆನೆಂದಿದಿರಾದನಾ ಖಳಗೆ ॥ ೧ ॥

ರಾಗ ದೇಶಿ ಅಷ್ಟತಾಳ

ಎಲ್ಲಿ ಪೋಪೆಯೊ ಫಡ ಫಡ ದಶಕಂಠ । ನಿಲ್ಲು ನಿನ್ನಯ ಬಲ್ಲತನವೆನ್ನಲ್ಲಿ ತೋರ್ ತೋರೆಂದನು ॥ ೧ ॥ ಕಲ್ಲು ಹೆಮ್ಮರಗಳಲಿ ರಾಕ್ಷಸಸೈನ್ಯವೆಲ್ಲವನು ಮಿಗೆ ಚೆಲ್ಲ ಬಡಿದನು । ಮಲ್ಲ ವಾಲಿಕುಮಾರನು ॥ ೨ ॥ ಪಡೆಯನೆಲ್ಲವ ಮಡುಹಲಂಗದನನಂ । ದೊಡನೆ ಖಳನುರಿ ಕಂಡು ನಯನದಿ । ಕಿಡಿಯನುಗುಳುತ ನುಡಿದನು ॥ ೩ ॥ ಫಡ ವನಾಚರ ಕೇಳೆಲೊ ನಿನ್ನಯ । ಕಡುಹ ನಿಲಿಸದೆ ಬಿಡೆನು ತವ ಗಡ । ಬಡೆಗಳೆನ್ನೊಳು ತೋರಿಸು ॥ ೪ ॥ ಎಂದು ಬೊಬ್ಬಿರಿದೆದ್ದು ನಾಲ್ದೆಸೆಯನ್ನು । ಮುಂದುವರಿದಮರೇಂದ್ರತನಯನ । ನಂದನನ ತೆಗೆದೆಚ್ಚನು ॥ ೫ ॥ ಬಂದು ಮುಕ್ಕುರಿಕಿದುದಂಬು ಮೈಯಲಿ । ನೊಂದು ತನುಮನಗುಂದಿ ಮೂರ್ಛೆಯೊ । ಳಂದು ಮಲಗಿದನಾತನು ॥ ೬ ॥

ವಾರ್ಧಿಕ

ತರಣಿಸುತನಂ ಕೆಡಹಿ ಯುವರಾಜನಂ ಮುರಿಯ । ಲುರುಭಯಂಕರ ನೀಲನಿದಿರಾದಡಾತನಂ । ಭರದಿ ಸಾಹಸವನೊಪ್ಪಂಗೆಡಿಸಿ ಜಾಂಬವ ನಳಾದಿ ಭಟರಂ ಸೋಲಿಸಿ ॥ ಶರಭ ಮೈಂದ ದ್ವಿವಿದ ಗಂಧಮಾದನ ಗವಯ । ರುರವಣೆಗಳಂ ನಿಲಿಸಿ ಕಾಲಭೈರವನಂತೆ । ಕೆರಳಿ ಮುಂದಯ್ತರುವ ದುರುಳ ದಶಕಂಠಗಿದಿರಾದನಾ ಸೌಮಿತ್ರಿಯು ॥ ೧ ॥

G. K. Bhat, M.A.,
MANGALORE.

ರಾಗ ಶಂಕರಾಭರಣ ಏಕತಾಳ

ಕಳ್ಳ ರಕ್ಕಸನೆ ಮುಂದಾ । ವಲ್ಲಿ ಪೋಪುದೆನ್ನ ಸಮರ । ದಲ್ಲಿ ಗೆಲ್ದ ಬಳಿಕಲಣ್ಣ । ನಲ್ಲಿಗೆ ಸಾರೊ ॥ ೧ ॥ ಹುಡುಗ ನೀನು ನಿನ್ನೊಳೆಮ್ಮ । ಕಡುಹು ಲೇಸಗೊಡದು ನಿನ್ನ । ಒಡಹುಟ್ಟಿದವನೊಳೀಗ । ಬೆಡಗ ತೋರ್ಪೆನು ॥ ॥ ೨ ॥ ಕೊಳಚೆ ನೀರ ದಾಟಲಾರ । ದೊಳವಿಗೇಕೊ ಕಡಲ ಮಾತು । ಗೆಲಿದು ಮೊದಲೊಳೆನ್ನನಣ್ಣ । ನಳವಿಗೆ ಬಯಸೊ ॥ ೩ ॥ ಮಕ್ಕಳಾಟಿಕೆಯೊಳು ತನಗೆ । ತಕ್ಕುದನಾಡದೆ ಬಹಳ । ಸೊಕ್ಕಿನ ಮಾತಾಡಿ ಬರಿದೆ ।

ಘಕ್ಕನಳಿವೆಯೊ ॥ ೪ ॥ ಬಾಯಿಗೆ ಬಂದಂತೆ ಕೆಟ್ಟ । ನಾಯಿಯಂತೆ ಬಗುಳಿ ಕಡೆಗೆ । ಸಾಯಬೇಡ ತೋರಿಸು ನಿ । ನ್ನಾಯತಿಕೆಯನು ॥ ೫ ॥

ರಾಗ ಘಂಟಾರವ ಮಟ್ಟೆತಾಳ

ಎನಲು ಕೇಳುತ । ಮನದಿ । ಕಿನಿಸ ತಾಳುತ ॥ ಘನತರಾಸ್ತ್ರದಿಂದ ಲೆಚ್ಚ । ದನುಜ ಗಜರುತ ॥ ೧ ॥ ಎಸೆದ ಸರಳನು । ಬೇಗ । ಕುಸುರಿ ತರಿದನು ॥ ಮುಸುಕಿದನು ಶರೌಘದಿಂದ । ಅಸುರಪತಿಯನು ॥ ೨ ॥ ಬರುವ ಕೋಲನು । ನಡುವೆ । ತರಿದು ಬಿಸುಟನು ॥ ಉರಿಯನುಗುಳುತಾಗ ಹೂಂ । ಕರಿಸುತೆಚ್ಚನು ॥ ೩ ॥ ಎಸುಗೆಗೆಸೆವುತ । ಬಾಣ । ವಿಸರ ಧುಮುಕುತ ॥ ಪಸರಿಸಿದುದು ಮುಂದೆ ಪತ್ತು । ದೆಸೆಯನೌಕುತ ॥ ೪ ॥ ಧರಣಿ ತಗ್ಗಿತು । ಸಪ್ತ । ಶರಧಿಯುಕ್ಕಿತು ॥ ಗಿರಿಗಳದುರಿತುರಗಪತಿಯು । ಕೊರಳು ಕುಗ್ಗಿತು ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಹೀಗೆ ಕಾದುತಲೀರ್ವರಿರಲಂದು । ಕಾಣು । ತಾಗ ವಿಭೀಷಣನುರಿ ನೊಂದು ॥ ಹೇಗಾಗುವುದೊ ಲಕ್ಷ್ಮಣನಿಗೆಂದು । ಬಂದ । ಬೇಗ ಗದೆಯ ಧರಿಸುತಲಂದು ॥ ೧ ॥ ಗದೆಗೊಂಡು ಬಹ ವಿಭೀಷಣನನು । ಕಂಡು । ಕದನಚಾಪಟ ದಶಕಂಠನು ॥ ಅಧಿಕ ರೋಷದೊಳು ಪಲ್ಮೊರೆವುತ್ತ । ನೆಲ । ನೊದೆದು ಪೇಳಿದನು ಹೂಂಕರಿಸುತ್ತ ॥ ೨ ॥ ಸುಡು ಸುಡು ಛೀ ನಿನ್ನ ಮೋರೆಯ । ವೈರಿ । ಯೊಡನೆ ಬಂದೆನಗದಿರಾದೆಯ ॥ ಒಡಲಾಸೆ ತೀರಿ ತೆಂದೆಣಿಸಿಕೊ । ಬೇಗ । ದೃಢವಾದ ದೇವರ ನೆನೆಸಿಕೊ ॥ ೩ ॥ ಎನುತಲೆ ಮಯನಿತ್ತ ಶಕ್ತಿಯ । ಸುರ । ಜನ ಬೆರಗಾಗೆ ರಾಕ್ಷಸರಾಯ ॥ ಘನತರ ಕೋಪದಿ ತುಡುಕುತ್ತ । ಬೈದು । ಪುನರಪಿ ಪೇಳ್ದನು ಕನಲುತ್ತ ॥ ೪ ॥

ಭಾಮಿನಿ

ಎಲವೊ ದುರ್ಜನರೆರೆಯ ಭಂಡರ । ತಿಲಕ ಹೇಡಿಗಳರಸ ಕೆಡುಕರ । ಕುಲಶಿರೋಮಣಿ ಕೇಳು ನಿನ್ನನು ಕಾವರಾರೆಂದ ॥ ತಳುವದಿದ ನೋಡೀಗ ಫಡ ಫಡ । ತೊಲಗದಿರು ನಿಲ್ಲೆನುತ ಪರವೋ । ಜ್ವಲಿತಶಕ್ತಿಯ ತೆಗೆದು ತಿರುಪಿಟ್ಟನು ದಶಾನನನು ॥ ೧ ॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಝಣಝಣತ್ಕೃತದಿಂದ ಬರುವಾ । ಕುಣಪಭೋಜನನಿಟ್ಟ ಶಕ್ತಿಯ । ಫಣಿಪನಂಶಜ ಲಕ್ಷ್ಮಣನು ಕಂ । ಡೆಣಿಸುತಿರ್ದನು ಮನದಲಿ । ತನ್ನೊಳಿಂತು ॥ ೧ ॥ ರಾಮನಭಯವನೀತಗಿತ್ತಿಹ । ನೀ ಮಹಾ ರಾಕ್ಷಸನ

ಕೊಂದೀ । ಹೇಮಮಯ ಲಂಕಾಧಿಪತ್ಯವ । ಪ್ರೇಮಿಸುವೆನೆಂದೆನುತಲಿ । ಮೊದಲೊಳಿವಗೆ ॥ ೨ ॥ ಖಳನ ಶಕ್ತಿಗೆ ನಿಮಿಷಮಾತ್ರದೊ । ಳಳಿವ ನಿಶ್ಚಯನೀ ವಿಭೀಷಣ । ನುಳಿವ ತೆರನನು ಮಾಡದಿರ್ದಡೆ । ಫಲಿಸದೆನ್ನಗ್ಗಳಿಕೆಯು । ಲೋಕದೊಳಗೆ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಎಂದು ಬರುವ ಶಕ್ತಿಗಿದಿರು ನಿಂದು ಲಕ್ಷ್ಮಣ । ಮುಂದುವರಿದು ಕಡಿವೆನೆಂಬನಿತರೊಳಾಕ್ಷಣ ॥ ಬಂದು ಪೊಕ್ಕುದಾಗ ಮೆಯ್ಯೊಳಾ ಮಹಾಸ್ತ್ರವು । ನಿಂದುದಾ ಸುಮಿತ್ರೆಯಾತ್ಮಭವನ ಸತ್ತ್ವವು ॥ ೧ ॥

ಭಾಮಿನಿ

ಘೋರ ಶಕ್ತಿಯು ಹತಿಗೆ ರಘುಕುಲ । ವೀರನನುಜನು ಮೈಮರೆದು ರಣ । ಧಾರಿಣಿಯೊಳೊರಗಿದನು ಸುರತರು ಮಲಗಿತೆಂಬಂತೆ ॥ ಮೂರು ಲೋಕದ ಜನಕೆ ಭಯವನು । ಭಾರಿಸಿತು ಹೊಗೆ ಮುಸುಕಿ ಖಳನು । ಬ್ಬೇರಿದನು ಕ್ಷಣಮಾತ್ರದೊಳಗೇನೆಂಬೆನದ್ಭುತವ ॥ ೧ ॥

ರಾಗ ಕಾಂಭೋಜ ಝಂಪೆತಾಳ

ಸೀತೆಯನು ಕದ್ದೊಯ್ದ ರೀತಿಯಲಿ ಕೊಂಡೊಯ್ವೆ । ನೀತನನು ಲಂಕೆಗೆಂದೆನುತ ॥ ಆತನಾಕ್ಷಣ ನಿಜವರೂಥದಿಂದಿಳಿದು ರಘು । ನಾಥನನುಜನ ಪೊರಗೆ ಬಂದು ॥ ೧ ॥ ತ್ವರಿತದಲಿ ಬಂದೆರಡು ಕರದಿಂದ ಲಕ್ಷ್ಮಣನ । ನಿರದೆ ನೆಗಹಲ್ಕೆ ದಶಶಿರನು ॥ ಅರರೆ ಬಹು ಭಾರದಿಂದಾನಲಾರದೆ ಹೋಗಿ । ಧರಣಿಯಲಿ ಮೊಳನೂರಿ ಬಿದ್ದ ॥ ೨ ॥ ಆದಡೇನಾಯ್ತೆನುತಲೆದ್ದು ಪುನರಪಿ ಖಳನು । ಕ್ರೋಧದಲಿ ಜಡಿದು ಖಡುಗವನು ॥ ಛೇದನವ ಗೆಯ್ದಿವನ ಶಿರವ ತನ್ನಯ ನಗರ । ಕೊಯ್ದಪೆನೆನುತ್ತ ನಿಂದಿರ್ದ ॥ ೩ ॥

ಭಾಮಿನಿ

ಮಂಜುಬೆಟ್ಟನ ಕುವರಿ ಕೇಳಾ । ಕಂಜಸಖಕುಲತಿಲಕನನುಜನ । ಭಂಜಿಸುವೆನೆಂದೆನುತ ರಾವಣನೆದ್ದು ನಿಂದಿರಲು ॥ ಕುಂಜರನ ಪಡಿಮುಖಕೆ ಹರಿತಹ । ರಂಜಕದ ಪಂಚಾಸ್ಯನಂದದೊ । ಳಂಜನಾಸುತನಂದು ಮೆಯ್ದೋರಿದನು ದಶಶಿರಗೆ ॥ ೧ ॥

ಕಂದ

ವಾಯುಕುಮಾರಕನಂ ಖಳ । ರಾಯನು ಕಾಣುತ್ತಲಧಿಕ ಭೀತಿಯೊಳಾಗಳ್ ॥ ಕಾಯದ ಕಂಪನದೊಳ್ ಪಿಡಿ । ದಾಯುಧಮಂ ಬಿಟ್ಟು ಬೆಚ್ಚಿ ಬೆರಗಿನೊಳಿರ್ದಂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಳಿರೆ ದಶಶಿರ ಶಸ್ತ್ರವಿದ್ಯವ । ಕಲಿತ ಬಗೆಯಾನಿತೇನೊ ಮೂರ್ಖನೆಯ ।
ತಳೆದು ರಣದಲಿ ಮಲಗಿದವರನು । ಕೊಲುವೆಯೇನ್ಕೈ ॥ ೧ ॥ ಇದಕೆ
ಪ್ರಾಯಶ್ಚಿತ್ತವನು ಮಾ । ಡದಡೆ ಲೇಸಲ್ಲೆನುತ ಮುಷ್ಟಿಯ । ನೊದಗಿನಲಿ
ಬಲಿವೃಕ್ಷಲೆಂದನು । ಚದುರ ಹನುಮ ॥ ೨ ॥ ಕರೆಸಿಕೋ ಬ್ರಹ್ಮನನು ಭೃಗು
ಜನ । ಬರಿಸು ಮೃತಸಂಜೀವಿನಿಯ ತೆಗೆ । ದಿರಿಸು ಸಾಯದುಪಾಯವನು
ಸ । ತ್ವರದಿ ರಚಿಸೊ ॥ ೩ ॥ ನಿರತವಿದು ಕೇಳೆಲವೊ ನಾವಂ । ತರಿಸುವವ
ರಲ್ಲೆನುತ ಕ್ರೋಧದೊ । ಳೆರಗಿದನು ಪವನಾತ್ಮಜನು ದಶ । ಶಿರನಿಗಂದು ॥
॥ ೪ ॥ ಹತ್ತು ಬಾಯೊಳಗೊಡನೆ ಬಿಸಿ ಬಿಸಿ । ನೆತ್ತರನು ಕಾರುತಲಿ
ಬಿದ್ದನು । ಮೃತ್ಯು ಬಡಿವಂದದಲಿ ಪ್ರಾಣವು । ನೆತ್ತಿಗೇರಿ ॥ ೫ ॥

ಭಾಮಿನಿ

ಮುಷ್ಟಿಹತಿಯಲಿ ವಶವಳಿದು ಕಂ । ಗೆಟ್ಟು ಹರಿವರುಣಾಂಬು
ಪೂರದಿ । ಥಟ್ಟುಗೆಡೆದವನಿಯಲಿ ಮಿಡುಕುವ ರಾಕ್ಷಸೇಶ್ವರನ ॥ ನಿಟ್ಟಿಸುತ
ವಾಯುಜನು ರಘುಪತಿ । ಸಿಟ್ಟುಮಾಡದೆ ಇರನು ಬರಿದೇ । ಕೆಟ್ಟುದಕಟಾ
ರಾಜಕಾರ್ಯವೆನುತ್ತ ಚಿಂತಿಸಿದ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಜ್ಞಾನವರ್ಜಿತನಾಗಿ ಮಾಡಿದೆ ಘಾತವ । ನಾನಲಾರದೆ ಕೋಪ
ವನ್ನು ॥ ದಾನವೇಂದ್ರನ ಮೇಲೆ ಕೈಮಾರ್ದುದೆನ್ನದಿ । ನ್ನೇನ ಮಾಡುವೆ
ನಯ್ಯೊ ವಿಧಿಯೆ ॥ ೧ ॥ ನ್ಯಾಯವಲ್ಲೆಂದಮರರು ಪೇಳದಿಹರೆ ರಾ । ಮಾ
ಯಣವೆಂದೆಂಬ ಪೆಸರು ॥ ವಾಯುವಾಯ್ತೆಂದು ಚಿತ್ರದಿ ರಘುನಾಥನು ।
ನೋಯದಿರ್ದಪನೆ ತಾನಿಂದು ॥ ೨ ॥ ಅಕಟಕಟನ್ನು ನಾ ಸ್ವಾಮಿದ್ರೋಹಿ
ಕೆಯ ಪಾ । ತಕಕೆ ಭಾಜನನಾದೆನಲ್ಲ ॥ ಸಕಲ ಲೋಕಾಧೀಶ ರಾಮ
ಚಂದ್ರನ ಭಾಷೆ । ತಳೆ ನೆಳಲಾದೆನಯ್ಯಯ್ಯೊ ॥ ೩ ॥

ಭಾಮಿನಿ

ಏಸೆಮತ್ರೇನೆಮ್ಮ ದುಷ್ಕೃತ । ದೋಷವಿದಲಾ ಮಾರಲಾರಳ । ವೇಸು
ಮರುಗಿದಡೇನು ನೋಡುವೆನೊಮ್ಮೆಗೀ ಖಳನ ॥ ವಾಸಿಯಂತರ್ಗತ
ಖಳ ಪ್ರಾ । ಣಾಸುಗತ ಸತ್ಪ್ರಾಣಗತಪರ । ಮಾಶುಗನು ಹಿಂಗಿದಡೆ ಹೊಗು
ವೆನು ಹವ್ಯವಾಹನನ ॥ ೧ ॥

ರಾಗ ಭೈರವಿ ಝಂಪೆತಾಳ

ಎಂದು ನಿಶ್ಚಯಿಸಿ ದಶ । ಕಂಧರನ ಹತ್ತಿರಕೆ । ಬಂದುಸಿರನಾರಯ್ದು ।
ನಂದು ಪವನಜನು ॥ ೧ ॥ ಎದೆಯೊಳಗೆ ತುಸುಮಿಡುಕ । ದಿದೆ ಪ್ರಾಣ
ವೆಂದೆನುತ । ಕುದಿಗೊಳುತ ತತ್ಕ್ಷಣದೊ । ಳುದಕವನು ತಂದು ॥ ೨ ॥
ಆದರದೊಳವಯವಕೆ । ತೋದಿ ಮೆಲ್ಲನೆ ಪೂಸ । ಲಾಧರಿಸಿಕೊಂಡೆದ್ದ ।
ನಾ ದಶಾನನನು ॥ ೩ ॥ ಚೇತರಿಸಿ ಮೆಲ್ಲನೆ । ದ್ವಾತನನು ನೋಡುತ್ತ । ಲಾ
ತತೂಕ್ಷಣ ಹನುಮ । ನೀ ತೆರದೊಳೆಂದ ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲವೊ ರಕ್ಕಸ ಗಾಯಕೌಷಧಿ । ಗೊಳಿಸು ಬೆದರದಿರಿನ್ನು ಬರಿದೇ ।
ಕೊಲುವವನು ನಾನಲ್ಲ ರಣದಲಿ । ಬಳಲಿದವರ ॥ ೧ ॥ ಬೇರೆ ಮಾತಿಲ್ಲಂಜ
ದಿರು ಕೈ । ಮಾರುವವರಲ್ಲಿನ್ನು ನೀ ರಘು । ವೀರನನು ಕೆಣಕಿದರೆ
ಶೌರ್ಯವ । ತೋರಿಸುವನು ॥ ೨ ॥ ಎಂದು ರಣಭೂಮಿಯಲಿ ಮೂರ್ಛೆಗೆ ।
ಸಂದು ಪವಡಿಸಿದೂರ್ಮಿಳಾಪತಿ । ಯಂದವನು ಕಾಣುತ್ತ ಮನದಲಿ ॥
ನೊಂದುಕೊಳುತ ॥ ೩ ॥

G. K. Bhat, M.A.,
MANGALORE.

ರಾಗ ಕೇದಾರಗೌಳ ಅಷ್ಟತಾಳ

ಸುರಿವ ಕಂಬನಿಯನ್ನು ನೆರಗಿಂದಲೊರಸುತ್ತ । ಮರುತಕುಮಾರಕನು ॥
ಹರ ಹರ ರವಿಕುಲಜರಿಗಿಂಥ ಭವಣೆಯು । ದೊರಕಿತಿಂದಿನಲೆಂದನು ॥ ೧ ॥
ಮರುಗಿ ಮಾಡುವುದೇನೆನುತ್ತ ಸೌಮಿತ್ರಿಯ । ನೆರಡು ಕಯ್ಯಿಂದಲೆತ್ತಿ ॥
ಧರಣಿಪನಿದಿರಲಿ ತಂದಿಳುಹಿದ ಕಳೇ । ವರವನು ಹನುಮಂತನು ॥ ೨ ॥

ಭಾಮಿನಿ

ಹನುಮನೀಪರಿಯಲಿ ಸುಮಿತ್ರಾ । ತನಯನನು ತಂದಿಳುಹಲಲ್ಲಿಗೆ ।
ಘನದ ಗರ್ಜನೆಯಿಂದ ನಡೆತಂದನು ದಶಾನನನು ॥ ಮನದೊಳವ ಬಂದು
ದನು ಗಣಿಸದೆ । ಜನಕಜಾವಲ್ಲಭನು ದುಃಖದೊ । ಳನುಜನನು ಕಾಣುತ್ತ
ಲಾ ವಾಯುಜನೊಳಿಂತೆಂದ ॥ ೧ ॥

ರಾಗ ನೀಲಾಂಬರಿ ಆದಿತಾಳ

ಏನಯ್ಯ ವಾಯುಸಂಜಾತ । ಮಾನವಂತ ಖ್ಯಾತ ॥ ಭಾನುಕುಲದ
ಕೋಳು ಹೋಯ್ತು । ನೀ ನಿಶ್ಚಯವ ಪೇಳ್ಳೆ ॥ ೧ ॥ ಹರಿದುದೊ ಋಣಾನು
ಬಂಧ । ಹರಚಿತ ಲಕ್ಷ್ಮಣಗೆ । ಇರುವುದೆ ಪ್ರಾಣಾಂಶವೆಂಬು । ದರು

ಹಯ್ಯ ಬೇಗದಲಿ ॥ ೨ ॥ ಬಲದ ಭಾಗವೀಕ್ಷನೆಂದು । ಗೆಲವಿನಿಂದಲಿರ್ದ ॥ ನೆಲೆಯ ಪೇಳ್ವೆ ತಮ್ಮನಿರವ । ತಿಳುವದೆನ್ನೊಳ್ ನಿಜವ ॥ ೩ ॥

ರಾಗ ಬೇಗಡೆ ಏಕತಾಳ

ಲಾಲಿಸೈ ಭೂಪಾಲ ಕುಲವರ್ಯ । ಸದ್ಧೈರ್ಯನಾಗೈ । ಕಾಲ ವಲ್ಲಿದು ಶೋಕಿಸಲೆ ಜೀಯ ॥ ಖೂಳ ದಶಶಿರ ಬಂದನಿದೆ ನೋ । ಡೇಳು ರಣಗಲಿಯಾಗು ಸುಮ್ಮನೆ । ತಾಳದಿರು ದುಮ್ಮಾನವನು ನಾ । ಪೇಳುವೆನು ಮುಂದೆಲ್ಲ ಕಾರ್ಯವ ॥ ಲಾಲಿಸೈ ॥ ಪ ॥ ಬಂದ ಹರಿಬಳ ಮೆಯ್ಗೊಡದೆ ನೀ । ನಿಂದು ಮರುಗುತ್ತ । ಕುಳ್ಳಿರೆ । ಚಂದವೇ ಜಗದಾತ್ಮ ದೇವ ಮು । ಕುಂದ ನೋಡಿತ್ತ । ಕಾಳಗ । ಕೊಂಡೆ ಮನವನು ಮಾಡು ಸುಮನಸ । ವೃಂದ ಬೆದರುತ್ತ ॥ ಇರ್ದಪ । ರೆಂದು ಮಾರುತನಂದನನು ನುಡಿ । ದಂದ ವನು ಕೇ । ಳ್ದಂದು ರಾಘವ । ಕುಂದದಾಗಳೆ । ಮುಂದೆ ಬಹ ದಶ । ಕಂಧ ರನ ಖತಿ । ಯಿಂದ ಕಂಡನು ॥ ಲಾಲಿಸೈ ॥ ೧ ॥

ಭಾಮಿನಿ

ಗಿರಿಜೆ ಕೇಳಾ ರಾಕ್ಷಸಾಧೀ । ಶ್ವರನ ಕಾಣುತ ದಶರಥಾತ್ಮಜ । ಗೆರಡು ಕಂಗಳು ಕೆಂಪಡರ್ದುದು ಮೀಸೆಯಲುಗಿದುದು ॥ ವರ ಮಹಾ ಧನುಶರವ ಕೊಂಡ । ಬ್ಬರದ ಗರ್ವದೊಳಾಡುಗಚ್ಚುತ । ಸುರರು ಹಾರಯಿಸಲ್ಕೆ ಸಮರಕೆ ನಿಂದನಾಕ್ಷಣದಿ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ವೀರರಾಮನಂದು ವರ ಸ । ಮೀರಸುತನ ಹೆಗಲನೇರಿ । ವೈರಿ ಯನ್ನು ಕಂಡು ತನ್ನ । ಭಾರಿ ಬಿಲ್ಲಿಗೆ ॥ ನಾರಿಯನ್ನು ತೊಡಿಸಿ ಝೇಂ । ಕಾರ ಧ್ವನಿಯ ಗೆಯ್ಯುತಮರ । ವಾರವೊಗಳಲೆಂದನವನೊ । ಳಾರುಭಟಿಸುತ ॥ ॥ ೧ ॥ ಎಲವೊ ಖಳನೆ ಹಿಂದೆ ನಮಗೆ । ತಿಳಿಯದಂತೆ ನಮ್ಮ ಸತಿಯ । ಕಳವಿನಿಂದಲೊಯ್ದು ಕೆಟ್ಟೆ । ಹೊಲೆಯ ನೀನಹೆ ॥ ಬಲುಹ ಮುರಿದು ದೇವ ತತಿಯ । ನೊಲಿದು ಸಂತವಿಡುವೆನೆಂದು । ಘಳಿಗೆ ನಿಲ್ಲೆನುತ್ತಲತಿ ಮೂ । ದಲಿಸುತೆಚ್ಚನು ॥ ೨ ॥ ಕಡುಹುಗಾರನಹುದು ನಿನ್ನ । ನುಡಿಯ ಕೇಳ್ದು ಮನಕೆ ಹರುಷ । ಬಡುವದೀಗ ಕೇಳು ಮನುಜ । ದೃಢದ ಮಾತಿದು ॥ ಮಡದಿಯನ್ನು ಕಳೆದುದಲ್ಲ । ದೊಡನೆ ನಮ್ಮ ಕೆಣಕಿ ಬರಿದೆ । ಕೆಡುವೆ ಫಡ ಫಡೆನುತಲಾಗ । ತಡೆಯದೆಚ್ಚನು ॥ ೩ ॥ ಎಸುವಡೆಸೆದ ಶರಗಳನ್ನು ।

ಕುಸುರಿದರಿದು ಬಳಿಕ ಬಾಣ । ವಿಸರವನ್ನು ಮುಸುಕಿ ಹೂಂಕ । ರಿಸುತ ಲೆಚ್ಚನು ॥ ಅಸಮ ಶರಧಿಯೊಡನೆ ಶರಧಿ । ಮುಸುಕುವಂತೆ ಮುಂದ್ವರಿದು ರಾ । ಕ್ಷಸಕುಲೇಂದ್ರನಂದು ಕದನ । ವೆಸಗುತಿರ್ದನು ॥ ೪ ॥ ಮಲೆತು ಸಿಂಹನೊಡನೆ ಸಿಂಹ । ಕುಲಿಶದೊಡನೆ ಕುಲಿಶ ಹುಲಿಯು । ಹುಲಿಯೊಳಿ ದಿರು ನಿಂದು ಭರದಿ । ಹಳಚುವಂದದಿ ॥ ಕಲಹಗಲಿಗಳೀರ್ವರುಬ್ಬಿ । ಛಳಿರೆ ಭಾಪೆನುತ್ತ ಕದನ । ತಳವು ತುಂಬಿದಂತೆ ಸರಳ । ಮಳೆಯ ಕರೆವುತ ॥ ೫ ॥ ಅಗ್ಗದಾರುಭಟೆಗಳಿಂತು । ಹಿಗ್ಗಿ ಕಾದುತಿರಲು ಧರಣಿ । ತಗ್ಗಿತೊಡನೆ ಕಮಠ ನಳುಕಿ । ಮುಗ್ಗುಲಾದನು ॥ ದಿಗ್ಗಜಂಗಳ್ಬೆದೆ ನೊಂದು । ಬಗ್ಗಿಸಿದುದು ಕೊರಳನೀರ್ವ । ರಗ್ಗಳಿಕೆಯನೇನನೆಂಬೆ । ಸದ್ಗುಣಾನ್ವಿತೆ ॥ ೬ ॥ ಅಗಜೆ ಲಾಲಿಸಿತ್ತ ಬಳಿಕ । ರಘುಕುಲಾಗ್ರಣಿಯನು ಹನುಮ । ಹೆಗಲೊಳಾಂತು ಬೀದಿವರಿದ । ನಗಡುತನದಲಿ ॥ ಬಗೆಯ ಕಂಡು ಮನದಿ ಕೋಪ । ಭುಗಿಲೆ ನುತ್ತಲಸುರಪತಿಯು । ಹೊಗರುಕಣೆಗಳಿಂದಲೆಚ್ಚ । ಧಿಗಿಲೆನುತ್ತಲಿ ॥ ೭ ॥ ಕಂಡು ರಾಮನಾಗ ಖತಿಯ । ಕೊಂಡು ಖಳನ ಕರದೊಳಿಹ ಕೋ । ದಂಡ ವನ್ನು ಕಡಿದ ಸುಪ್ರ । ಚಂಡಸಾಹಸ ॥ ದಿಂಡುದರಿದು ರಥವನೆರಡು । ತುಂಡುಗಡಿದು ಕ್ಷಣದೊಳವನ । ಷಂಢನೆನಿಸಿ ಬಿಟ್ಟನಂದು । ದ್ವಂಡ ಸತ್ತ್ವದಿ ॥ ೮ ॥

ಕಂದ

ಕರದುರುತರ ಕಾರ್ಮುಕಮಂ । ವರ ಸಾರಥಿ ರಥವನಯ್ದೆ ರಘು ಕುಲತಿಲಕಂ ॥ ಧುರದೊಳು ತಡೆಗಡಿಯಲ್ಕಾ । ದುರುಳ ದಶಾನನನು ಖತಿಯ ತಾಳ್ದಿಂತೆಂದಂ ॥ ೧ ॥

ರಾಗ ಭೈರವಿ ಏಕತಾಳ

ಎಲವೊ ಮನುಜ ನೀ ಕೆಟ್ಟೆ । ಬೆಂ । ಬಲವಿಲ್ಲದೆ ರಣಗೊಟ್ಟೆ ॥ ಬಿಲು ಖಂಡಿಸಲದಕೇನೊ । ಕಡು । ಗಲಿತನ ಹಿಂಗುವುದೇನೊ ॥ ೧ ॥ ಎನುತ ಮಹಾಸಿಯ ಕೊಂಡು । ಖಳ । ನನುವಾಗುತ್ತಿರೆ ಕಂಡು ॥ ಅನುವರದಲಿ ರಾಘವನು । ಸೆಳೆ । ದನು ನಗುತಾ ಖಡ್ಗವನು ॥ ೨ ॥ ಖಡುಗವು ಪೋಗ ಲಾಗ । ಕಂ । ಡೊಡನೆ ದುರುಳನತಿ ಬೇಗ ॥ ಪಿಡಿಯೆ ಗದಾ ದಂಡವನು । ಕೈ । ದುಡುಕಿ ಸೆಳೆದ ರಘುವರನು ॥ ೩ ॥

ಭಾಮಿನಿ

ಗದೆಯು ಪೋಗಲು ರಾಕ್ಷಸಾಧಿಪ । ನಧಟುತನದಲಿ ಶೂಲವನು

ಕೊಂ । ಡಿದಿರು ನಿಲ್ಲಲು ತತ್‌ಕ್ಷಣದಿ ಸೆಳೆದನು ರಘೋತ್ತಮನು ॥ ವಿಧವಿಧ ದೊಳಿಪ್ಪಾಯುಧಂಗಳ । ಕದನಚಾಪಟ ದಶಗಳನು ಕೊಂ । ಡೊದಗಲದ ನೆಲ್ಲವನು ರಣದಲಿ ಗೆಲಿದನಾ ರಾಮನು ॥ ೧ ॥

ಕಂದ

ತೋಯಜಮುಖಿ ಕೇಳ್ ಬಳಿಕ ನಿ । ರಾಯುಧನಾಗಿರುವ ಖಳನ ನೀಕ್ಷಿಸುತಾಗಳ್ ॥ ವಾಯುಕುಮಾರನ ಮೊಗಮಂ । ರಾಯ ರಘೂದ್ವಹನು ಕಂಡು ಬಳಿಕಿಂತೆಂದಂ ॥ ೧ ॥

ರಾಗ ಸುರುಟಿ ಏಕತಾಳ

ಏನೈ ಹನುಮಂತ । ಪೇಳು ನಿ । ಧಾನಿಸಿ ಗುಣವಂತ ॥ ಈ ನಕ್ತಂಚರ ಶ್ವಾನನನಿಂದಿಗೆ । ಹಾನಿಯ ಮಾಡಲೊ ಪ್ರಾಣವನುಳುಹಲೊ ॥ ಏನೈ ॥ ೧ ॥ ಹಲಬರೊಡನೆ ಕಾದಿ । ಕಾಯದಿ । ಬಳಲಿಹನಿವ ರಣದಿ ॥ ಕೊಲುವದಿದೇ ನಗ್ಗಳಿಕೆಯೊ ರಘುಕುಲ । ತಿಲಕಗೆನುತ ಜನಚಯವೆನದಿರ್ಪುದೆ ॥ ಏನೈ ॥ ೨ ॥ ಆಯುಧಹೀನನನು । ಕೊಲುವುದು । ನ್ಯಾಯವಿದಲ್ಲಿದನು ॥ ಆಯತ ದಲಿ ತಿಳಿದೀತನ ಬಿಡುವೆನು । ನೀಯೆಂಬುವುದೇನೆನಲವನೆಂದನು ॥ ಏನೈ ॥ ೩ ॥

ರಾಗ ಕಾಂಭೋಜ ಅಷ್ಟತಾಳ

ಲಾಲಿಸು ದೇವರ ದೇವ । ಜಗ । ತ್ಪಾಲಕ ಶರಣಸಂಜೀವ ॥ ಪೇಳುವು ದೇನು ನಮ್ಮಭಿಮತ ಬೇರುಂಟೆ । ಪಾಲಿಪುದುಚಿತವೀ ಸಾರಿಗೆ ಖಳನನು ॥ ॥ ೧ ॥ ಎಂದು ಕೈಮುಗಿದು ಮಾರುತಿಯು । ಪೇಳೆ । ಲಂದು ಕೇಳುತ ದಾಶರಥಿಯು ॥ ಮಂದಹಾಸದೊಳರ್ಧಚಂದ್ರ ಬಾಣದಲಿ ಸಂ । ಕ್ರಂದ ನಾದ್ಯಮರರ ವೃಂದವು ನಗುವಂತೆ ॥ ೨ ॥ ಖಳರಾಯನಿಂಗೊಪ್ಪುತಿರುವ । ಹೊಳೆ । ಹೊಳೆವ ಕಿರೀಟ ಕುಂಡಲವ ॥ ತಳುವದೆ ಕಡಿದದರಿಳೆಯೊಳಗಿಳು ಹುತ । ಬಳಿಕವನೊಳು ರಘುಕುಲಜನಿಂತೆಂದನು ॥ ೩ ॥

ರಾಗ ಸವಾಯ್‌ಜಂಗಲ್ ಏಕತಾಳ

ಎಲ ಎಲ ಧೀ ರಕ್ಕಸ ಕುನ್ನಿ । ನಿಲದಿರು ನೀನೆನ್ನಿದಿರಿನಲಿ ॥ ತ್ರಿಲೋಕ ಕಂಟಕ ನಿನ್ನ ಪ್ರಾಣವ । ನುಳುಹಿದೆನಿಂದಿಗೆ ಘಡ ಘಡ ನಡೆ ನಡೆ ॥ ಎಲ ಎಲ ॥ ೧ ॥ ಒಡಹುಟ್ಟಿರುವ ವಿಭೀಷಣನೆಂಬವ । ನೊಡಲುರಿದಪುದೇನೆಂದೆ ನುತ ॥ ಧಡಿಗನೆ ನಿನ್ನನು ಬಿಟ್ಟಿಹೆನಿಂದಿನ । ಕಡುಹನು ನಾಳಿನ ದಿನದಲಿ ತೋರ್ಪೆನು ॥ ಎಲ ಎಲ ॥ ೨ ॥ ತರಣಿಯು ಪಡುವಣ ಶರಧಿಯೊಳಿಳಿ

ದನು । ತರುಬಿತು ಕತ್ತಲೆಯೂರ್ವಿಯನು ॥ ಶರಹತಿಯಲಿ ಕಡು ನೊಂದಿಹೆ ನೀ ಕೇಳ್ । ತೆರಳೊ ಲಂಕೆಗೆ ನಾಚಿಕೆಗೆಡುಕನೆ ॥ ಎಲ ಎಲ ॥ ೩ ॥

ವಾರ್ಧಿಕ

ಇಂತೆಂದು ರಾಘವಂ ಬೈದು ಕಳುಹಲ್ಕೆ ಖಳ । ನಂತರಂಗದಿ ನೊಂದು ಕಡು ನಾಚುತಂ ಬಂದು । ಚಿಂತಾಗ್ನಿಯಿಂದ ಕುದಿ ಕುದಿಯುತಂ ಕೈದುಗಳ ಘಾತದಿಂದುರೆ ನೋವುತ ॥ ಪಂಥವಳಿದುಂ ಬೇಗ ಮರಿದ ದುಮ್ಮಾನದಿಂ । ದಂತರಿಸಿ ನಿಳಯಕಯ್ದಿದ ಬೀಳುತೇಳುತಂ । ಸಂತಾಪದಿಂದಲಯ್ತಂದು ಪೊಕ್ಕನು ಬಿಲವ ಗೂಢಾಂಘ್ರಿ ಪೊಗುವಂದದಿ ॥ ೧ ॥

ಭಾಮಿನಿ

ವನಜಮುಖಿ ಕೇಳಿತ್ತಶೋಕಾ । ವನದೊಳಾ ದಿನದಿರುಳಿನೊಳು ವರ । ಜನಕನಂದನೆಗಾಯ್ತು ಬಹು ದುಃಸ್ವಪ್ನ ಸೂಚನೆಯು ॥ ಘನತರದ ಚಿಂತೆ ಯಲಿದೇನಂ । ದೆನುತ ಮನದಲಿ ಬೆದರಿ ಬಳಿಕಾ । ವನಿತೆ ದುಮ್ಮಾನದಲಿ ತ್ರಿಜಟೆಯೊಳೆಂದಳೀ ತೆರದಿ ॥ ೧ ॥

ರಾಗ ತೋಡಿ ಏಕತಾಳ

ಗಜರಾಜಸನ್ನಿಭಯಾನೆ । ತ್ರಿಜಟೆ ನೀ ಕೇಳಿದೆಯೇನೆ । ನಿಜವನರಿ ತಿದನು ಪೇಳೆ । ಭುಜಗವೇಣಿ ಚಾರುಶೀಲೆ ॥ ಗಜ ॥ ೧ ॥ ಬಲದ ಕಣ್ಣಿನ ಹೊಡೆಯು । ಅಲುಗುತಿದೆ ದಕ್ಷಿಣ ತೊಡೆಯು । ಬಲು ಕಂಪಿಸುತಿಹುದು ಕಾಣೆ । ನೆಲೆಯನರಿಯದಾದೆ ಜಾಣೆ ॥ ಗಜ ॥ ೨ ॥ ರಾಮಗೇನೊ ಲಕ್ಷ್ಮ ಣಂಗೆ । ಕ್ಷೇಮವಿಹುದೊ ಕಪಿಗಳಿಂಗೆ । ಪ್ರೇಮವೆಂತೊ ತಿಳಿಯದೆಂದು । ಭೂಮಿಜೇ ದುಃಖಿಸಿದಳೆಂದು ॥ ಗಜ ॥ ೩ ॥ ಈತೆರದಿ ಚಿಂತೆಗೊಂಡು । ಸೀತೆಯಿರಲು ತ್ರಿಜಟೆ ಕಂಡು । ಕಾತರಿಸದಿರೆಂದು ಬೇಗ । ಪ್ರೀತಿಯಿಂದ ನುಡಿದಳಾಗ ॥ ಗಜ ॥ ೪ ॥

ರಾಗ ನವರೋಜು ಏಕತಾಳ

ಚಿಂತಿಸಬೇಡಾ ತಾಯೆ । ಗುಣ । ವಂತೆ ಕೋಮಲಕಾಯೆ ॥ ಕಾಂತಾಮಣಿ ತವ । ಕಾಂತನಿಗಪಜಯ । ವೆಂತಹುದೈ ಹನು । ಮಂತ ನಿರುತ್ತಿರೆ ॥ ಚಿಂತಿಸ ॥ ೧ ॥ ಜಗದಾಜೀವನನವನು । ಕೇಳ್ । ರಘುವೀರಾ ನೆಂಬವನು ॥ ಬಗೆವನೆ ಈ ಬಣ । ಗುಗಳನು ಸುಮ್ಮನೆ । ಮುಗುಧತನವ ಬಿಡು । ಮೃಗಮದಗಂಧಿ ॥ ಚಿಂತಿಸ ॥ ೨ ॥ ಕನಸ ಕಂಡೆನು ನಾನು । ಲ ।

ಕ್ಷ್ಮಣಗೆ ಬಂದೆಡರ್ಗಳನು ॥ ಹನುಮನು ಪರಿಹರ । ವನು ಮಾಡಿದನೆಂ । ಬಿನಿತು ಹದನಗಳ । ವನಜದಳಾಂಬಕಿ ॥ ಚಿಂತಿಸ ॥ ೩ ॥

ಭಾಮಿನಿ

ದಂತಿಸನ್ನಿಭಗಾಮಿನಿಯೆ ಕೇ । ಳಿಂತು ಸ್ವಪ್ನದ ಪರಿಯ ತಿಳುಹಿಸಿ । ಸಂತವಿಸಲಾ ತ್ರಿಜಟೆ ಶಾಂತೋಕ್ತಿಯಲಿ ಮಿಗೆ ಮನದ ॥ ಚಿಂತೆಯನು ಬಿಡಲರಿಯದಾ ನಿಜ । ಕಾಂತನನು ಹಂಬಲಿಸುತಂದು ಮ । ಹಾಂತ ಶೋಕದೊಳಿರ್ದಳತ್ತಲು ಹಲುಬುತಾ ಸೀತೆ ॥ ೧ ॥

ರಾಗ ಬಿಲಹರಿ ಏಕತಾಳ

ಇತ್ತ ರಾಘವಗೆ ಕೋಪದ ಮಬ್ಬು ಮುರಿದುದು । ಚಿತ್ತದಿ ಶೋಕವು ತಲೆದೋರಿತೊಡನೆ ॥ ಕತ್ತಲೆಯೊಳು ತಡವರಿಸುತ್ತ ತಮ್ಮ ನೀ । ನೆತ್ತ ಪೋದೆಯೊ ಮೊಗದೋರೆಂದನಳುತ ॥ ೧ ॥ ಅಯ್ಯಯ್ಯೊ ಹನುಮಂತ ಬಾರೆನ್ನ ಗುಣವಂತ । ಮೈಯ್ಯೊಳು ತಾಪವು ಹೆಚ್ಚಿತಿಂದೆನಗೆ ॥ ಒಯ್ಯನೆ ನೀನೆನ್ನ ತಮ್ಮನೆಡೆಗೆ ಕರೆ । ದೊಯ್ಯೊ ಕಾಣದೆ ಜೀವಿಸಿರಲಾರೆನಿನ್ನು ॥ ೨ ॥ ಎಂದು ಮಾರುತಿ ಕಯ್ಪಿಡಿದು ರಾಘವನ ಕರೆ । ತಂದನು ಶೀಘ್ರದಿ ತಮ್ಮನಿದ್ದೆಡೆಗೆ ॥ ಕಂದಿದಾನನದೊಳು ಸಹಜಾತನರಸುತ್ತ । ಬಂದನು ಬಳಲುತ್ತ ರಣಭೂಮಿಗವನು ॥ ೩ ॥ ಎಳೆ ಲತೆಯುದ್ಯಾವನದಿ ಬಿರುಬಿಸಿಲಿಗೆ । ಝಳ ಹೊಡೆದಿಳೆಯೊಳು ಬಾಡಿ ಬಿದ್ದಂತೆ ॥ ಖಳನ ಶಕ್ತಿಯ ಹತಿಯಿಂದ ಮೂರ್ಛಿತನಾಗಿ । ಮಲಗಿರುವನುಜನ ಕಂಡನಾ ರಾಮ ॥ ೪ ॥

ಶಾರ್ದೂಲವಿಕ್ರೀಡಿತಂ

ವರ ಸೌಮಿತ್ರಿಯನೀಕ್ಷಿಸುತ್ತಲಿಳೆಯೊಳ್ ಕಂಗೆಟ್ಟು ಮೈಚಾಚುತಾ । ಭರದಿಂ ತಮ್ಮನೆ ಹಾಯೆನುತ್ತ ಕರದೊಳ್ ತಕ್ಕೈಸಿ ಮುದ್ದಾಡುತಾ॥ಮರೆದುಂ ತಾ ಪರಮಾತ್ಮನೆಂಬ ಬಗೆಯಂ ಕಣ್ಣೀರಿನೊಳ್ ತೊಯ್ವುತಾ । ನರರಂತಾ ರಘುವೀರನೈದೆ ಮರುಗುತ್ತಿರ್ದ ತಾ ಬೆಂಡಾಗುತಾ ॥ ೧ ॥

ರಾಗ ನೀಲಾಂಬರಿ ರೂಪಕತಾಳ

ಅಯ್ಯೋ ತಮ್ಮನೆ ನೆಲದೊಳು । ಮೈಯ್ಯನು ಚಾಚಿದೆಯಾ ದ । ಮ್ಮಯ್ಯ ನಿದಾನಿಸುತೆನ್ನೊಡ । ನೊಯ್ಯನೆ ಮಾತಾಡು ॥ ಅಯ್ಯೋ ॥ ಪ ॥ ಅಡವಿಯು ಸಲ್ಲದು ನಿನಗೆಂ । ದೊಡಬಡಿಸಲು ಕೇಳದೆ ನ । ನ್ನೊಡನಯ್ದಿದೆ ಹಳುವಕೆ ಬಳಿ । ಕೊಡಲಿಕ್ಕೆಯೊ ಧರೆಗೆ ॥ ಪಡೆದಿಹ ತಾಯನು ಮಿಗೆ ಕೈ । ವಿಡಿದಿಹ

ಸತಿಯನು ಮರೆದವ । ಘಡಿಸಿ ದಶಾಸ್ಯನ ರಣದಲಿ । ಮಡಿದೇಯೊ ನೀ ಕಡೆಗೆ ॥ ಅಯ್ಯೋ ॥ ೧ ॥ ಜರಿದೆನು ಮಾಯಾಮೃಗವನು । ತರುವಾಗಲು ಬೇಡೆಂದರೆ । ಧರಣಿಜೆಯನು ಬಳಿಕಾ ದಶ । ಶಿರ ತಾ ಕೊಂಡೊಯ್ಯೆ ॥ ವಿರಹದಿ ನಿನ್ನಲಿ ಕಡು ನಿ । ಷ್ಠುರದಲಿ ಕೋಪಿಸಲದರನು । ಮರೆದಿದಿರ್ದಾ ಸಮಯದೊಳೀ । ಪರಿಯಲಿ ಮುನಿದಪರೆ ॥ ಅಯ್ಯೋ ॥ ೨ ॥ ತರುಣಿಯ ಕಾರಣ ನಿನ್ನನು । ಧುರಕಿಕ್ಕಿದೆನೆಂದೆನಲೋ । ದುರುಳನ ಶಕ್ತಿಯ ಹತಿಯಿಂ । ದೆರಗಿದನೆಂದೆನಲೋ ॥ ಎರಡನೆಯವ್ವೆಯೊಳೇನೆಂ । ದೊರೆಯಲಿ ಪಣೆಯೊಳಗೀ ಪರಿ । ಬರೆದನೆ ವಿಧಿ ಹಾ ಹಾ ಎಂ । ದೊರಲಿದನೀ ತೆರದಿ ॥ ಅಯ್ಯೋ ॥ ೩ ॥

ಭಾಮಿನಿ

ಮಂದಗಾಮಿನಿ ಲಾಲಿಸಾ ರಘು । ನಂದನನು ಲಕ್ಷ್ಮಣನ ಗುಣಗಳ । ನಂದು ಯೋಚಿಸಿ ಮರುಗುತಿರ್ದನು ಬಿಗಿದ ಬೆರಗಿನಲಿ ॥ ಕುಂದಿ ನಾನಾ ತೆರದಿ ಶೋಕಿಸು । ವಂದವನು ಕಾಣುತ್ತ ಪರಮಾ । ನಂದದಲಿ ಕೈಮುಗಿದು ಜಾಂಬವನೆಂದನವನಿಪಗೆ ॥ ೧ ॥

G. K. Bhat, M.A.,
MANGALORE.

ರಾಗ ಮಧ್ಯಮಾವತಿ ಏಕತಾಳ

ಕೇಳೆನ್ನ ಮಾತನು ಶ್ರೀರಾಮಚಂದ್ರ । ಪೇಳುವೆ ಮನ್ನಿಸದಿರವ ಭೂಮೀಂದ್ರ ॥ ಕೇಳೆನ್ನ ॥ ಪ ॥ ಜೀಯ ಚಿಂತಿಪುದೇಕೆ ಬಿಡು ಬಿಡು ಮನಸಿನ । ಮಾಯೆಯ ಶೋಕವ ಲೋಕಪಾಲಕನೆ ॥ ವಾಯುಸಂಭವನ ಸಂಜೀವನಕೋಸುಗ । ಪ್ರಿಯದಿ ಕಳುಹಯ್ಯ ದ್ರೋಣಪರ್ವತಕೆ ॥ ಕೇಳೆನ್ನ ॥ ೧ ॥ ಅಂಜುವ ಕಾರಣವೇನಯ್ಯ ಪಗಲೊಳು । ಮಂಜು ಮಾರ್ತಾಂಡನ ಮುಸುಕುವುದುಂಟೆ ॥ ಜಂಜಡವನು ಬಿಟ್ಟು ಹನುಮನ ಕಳುಹೆಂದು । ಕಂಜಜಸಂಭವ ಪೇಳ್ದ ಕೈಮುಗಿದು ॥ ಕೇಳೆನ್ನ ॥ ೨ ॥

ಕಂದ

ದ್ರುಹಿಣಾತ್ಮಜನೆಂದುದನುಂ । ಮಿಹಿರಕುಲಾರ್ಣವಸುಧಾಂಶು ಲಾಲಿಸುತಾಗಂ ॥ ವಿಹಿತವಿದೆಂದುಂ ಚಿತ್ತದಿ । ಗ್ರಹಿಸುತಲಿಂತು ಹನುಮಂತನೊಡನಿಂತೆಂದಂ ॥ ೧ ॥

ರಾಗ ನೀಲಾಂಬರಿ ಏಕತಾಳ

ಹೀಗೆ ಬಾರೋ ಏ ಹನುಮ । ಕಂಡೆಯ ತಮ್ಮ । ನಾಗಮವನು ಸುಪ್ರೇಮ ॥ ಹೇಗೆ ಸೈರಿಸಿಕೊಂಬೆನ್ನೈ । ಈತಗೆ ಬಂದ । ಯೋಗವನೆಂತು

ಕಾಂಬೆನ್ನೈ ॥ ೧ ॥ ಮೊದಲು ಕೀಶೌಘವನು । ಜೀವಿಸಿದ ಗುಣ । ನಿಧಿಯ್ಕೈಸೆ ಹನುಮ ನೀನು ॥ ಒದಗಿದ ಹರಿಬವನು । ಕಾದು ತಮ್ಮನ । ಬದುಕಿಸಿಂದಿ ನೊಳೆಂದನು ॥ ೨ ॥

ರಾಗ ಘಂಟಾರವ ರೂಪಕತಾಳ

ವನಜಲೋಚನ ಅಘವಿಮೋಚನ । ದನುಜಮರ್ದನ ಕೀರ್ತಿವರ್ಧನ ॥ ಇನಿತು ಕೆಲಸಕೆ ಎನ್ನನೇತಕೆ । ಘನವ ಮಾಡುವೆ ಪಿರಿದು ಪೊಗಳುವೆ ॥ ॥ ೧ ॥ ಪನ್ನತಿಕೆಯಲಿ ಸುರರು ತಡೆಯಲಿ । ವಹ್ನಿನೇತ್ರನೇ ಮುನಿದು ಪೋಗಲಿ ॥ ನಿನ್ನ ಕರುಣ ಒಂದಿರಲಿ ತರುವೆನು । ಮುನ್ನಿನಂದದಿ ಸಂಜೀವನ ವನು ॥ ೨ ॥ ಎಂದು ರಾಮನ ಚರಣಕಾಕ್ಷಣ । ವಂದನೆಯನು ಗೆಯ್ದು ಹನುಮನು ॥ ಅಂದು ನೇಮವ ಕೊಂಡು ವಾಯುವ । ನಿಂದು ಸ್ಮರಿಸುತ ಪೊರಟನುಬ್ಬುತ ॥ ೩ ॥

ವಾರ್ಧಿಕ

ಕೋಮಲತರಾಂಗಿ ಕೇಳಿತ್ತಂಜನಾತ್ಮಜಂ । ರಾಮಚಂದ್ರನೊಳ್ಪೆದೆ ನೇಮಮಂ ಕೊಂಡು ಸು । ಪ್ರೇಮದಿಂ ಪೊರಟನಿಲವೇಗದಿಂದೌಷಧಿಗೆನುತ್ತ ಪೋಗಲ್ಕಿತ್ತಲು ॥ ಆ ಮಹಾ ಲಂಕಾಪುರಾಧಿಪತಿಯಾಗಿರ್ಪ । ಭೀಮಬಲ ದಶಕಂಠನೆಡೆಗೆ ಬೇವಿನ ಚರರ್ । ಪ್ರೈಮನಸ್ಸಿನೊಳಾಗ ನಡೆತಂದು ಪೇಳ್ದರೀ ವೃತ್ತಾಂತವಂ ಭರದೊಳು ॥ ೧ ॥

ರಾಗ ಸಾವೇರಿ ಅಷ್ಟತಾಳ

ದನುಜೇಂದ್ರ ಲಾಲಿಸಯ್ಯ । ನಾವೆಂಬುದ । ಮನಸಿನೊಳಿಟುಚ ಜೀಯ ॥ ಪ ॥ ತನ ಶಕ್ತಿಯಲಿ ಮಡಿದ । ಲಕ್ಷ್ಮಣನ ರಾ । ಘವ ಪರಿಪರಿ ನೋಡಿದ ॥ ವಿವರಿಸಿ ತಮ್ಮನ ಗುಣಗಳ ಮರುಗೆ ಜಾಂ । ಬವನೊಡಬಡಿಸಿದನು ॥ ಮತ್ತವನು ॥ ೧ ॥ ಈಗಲಾ ಸೌಮಿತ್ರಿಯ । ಜೀವಿಸುವುದ । ಕಾಗಿ ಮಾರುತತನಯ ॥ ಸಾಗಿದನಮಳ ಸಂಜೀವನವಿರುತಿರು । ವಾ ಗಿರಿಗೆಂದೆನುತ ॥ ಪರ್ವತಯೊಳಾತ ॥ ೨ ॥

ಭಾಮಿನಿ

ಚಾರಕರ ನುಡಿ ಕೇಳ್ದು ಚಿಂತಾ । ಭಾರದಲಿ ಕುದಿಕುದಿದು ದಶಶಿರ । ನೇರಿದಾಸನವಿಳಿದು ಬಳಿಕೇಕಾಂತಮಂದಿರಕೆ ॥ ಆರು ತಿಳಿಯದ ತೆರದೊಳೊಯ್ಯನೆ । ಸಾರಿ ತನ್ನೊಳು ತಾನೆ ಹರ ಹರ । ದಾರಿ ಮುಂದೇನೆನುತ ಬೇರೊಂದೆಣಿಸುತಿಂತೆಂದ ॥ ೧ ॥

ರಾಗ ಕಾಂಭೋಜ ಝಂಪೆತಾಳ

ಕಲಿ ಹನುಮನೆಂಬುವನು ಪೋದ ಕಾರ್ಯವ ಮಾಡಿ । ಕೊಳದೆ ಬಾರನು ಬಲ್ಲೆನವನು ॥ ತಿಳಿಯಲೊಂದುಂಟುಪಾಯವು ಕಾಲನೇಮಿಯನು । ಕಳುಹಿ ಮಾರ್ಗದಲಿ ವಿಘ್ನವನು ॥ ೧ ॥ ಬಹುಪ್ರಕಾರದಿ ಗೆಯ್ಸಲದನು ಕಳೆದಾಮೇಲೆ । ತಹನ್ನೆಸೆ ಹನುಮನೌಷಧಿಯ ॥ ಬಹದರೊಳಗಿಲ್ಲಿ ಮತ್ತೊಬ್ಬರನು ನಾನು ನಿ । ರ್ವಹಿಸದಿರ್ದಪೆನೊ ನಾಳಿನಲಿ ॥ ೨ ॥ ಎಂದೆಣಿಸಿ ಮುಂಗೆಲಸಕಾ ಕಾಲನೇಮಿಯಿಹ । ಮಂದಿರಕೆ ಪೋಗಬೇಕೆನುತ ॥ ಮಂದಮತಿ ರಾವಣನು ಮತ್ತೊರ್ವರರಿದನರಿಯ । ದಂದದಲಿ ಪೊರಟು ನಡೆತಂದ ॥ ೩ ॥ ಏಕಾಂಗಿಯಾಗಿ ಕಾಲ್ನಡೆಯಿಂದಲಯ್ತರುವ । ಲೋಕೈಕವೀರನನು ಕಂಡು ॥ ಆ ಕಾಲನೇಮಿಯುರಿದಿದಿರಾಗಿ ಬಂದು ಕೂ । ಡೇಕಾಂತಭವನಕಯ್ತಂದ ॥ ೪ ॥

ರಾಗ ಸಾಂಗತ್ಯ ರೂಪಕತಾಳ

ಏನಯ್ಯ ದಶಕಂಠ ಮಧ್ಯರಾತ್ರೆಯಲಿ ದು । ಮ್ಮಾನದೊಳಯ್ತಂದ ಕೆಲಸ ॥ ಮಾನವಂತನೆ ಕರುಣಿಸು ತನಗೆಂದು ಸ । ನ್ಮಾನದೊಳವನೊಡನೆಂದ ॥ ೧ ॥ ಪೇಳಲು ತುದಿಬೀಳದೆಮ್ಮಯ ಪರಿಭವ । ಪೇಳುವೆ ಸ್ವಲ್ಪಮಾತ್ರದಲಿ ॥ ಕೇಳು ಹಾಗಾದಡೆ ಮಯನಿತ್ತ ಶಕ್ತಿಯಿಂ । ದಾ ಲಕ್ಷ್ಮಣನ ಕೆಡಹಿದೆನೊ ॥ ೨ ॥ ಅವನ ಜೀವಿಸಲು ಸಂಜೀವನ ತರುವರೆ । ಪವನಸಂಭವ ದ್ರೋಣಗಿರಿಗೆ ॥ ಹವಣಿಸಿ ಪೋಗಿಹನಂತೆ ನೀನಲ್ಲಿಗೆ । ತವಕದಿ ತೆರಳಿ ಮುಂದಾಗಿ ॥ ೩ ॥ ತಡೆದು ಮಾಯಾಮುನಿವೇಷದೊಳಗೆ ಪೋಗು । ವೆಡೆಯ ಮಾರ್ಗದಲಿ ವಿಘ್ನವನು ॥ ಬಿಡದೆಸಗುತ್ತಲೌಷಧಿಯನು ತಾರದಂ । ತಡವರಿಸಯ್ಯ ಯತ್ನವನು ॥ ೪ ॥ ಎನಲು ಪೇಳ್ದನು ಕಾಲನೇಮಿಯು ಕೇಳಯ್ಯ । ದನುಜೇಂದ್ರ ನೀನೇಕೆ ಬರಿದೆ ॥ ಘನಮೂರ್ಜಿತನವನು ಗೆಯ್ದೆ ರಾಘವನಾರಿಂ । ದೆನುತರಿಯದೆ ದ್ವೇಷದಿಂದ ॥ ೫ ॥ ಆದಿನಾರಾಯಣನವನು ಕೇಳ್ ನಿನ್ನಯ । ಭೇದವು ಕೊಳ್ಳದಾತನಲಿ ॥ ಮೇದಿನಿಸುತೆಯನಿತ್ತಾ ರಾಮಚಂದ್ರನ । ಪಾದವ ಮರೆಪೋಗು ಬೇಗ ॥ ೬ ॥ ಅನುಜನ ಕರೆತಂದು ಪಟ್ಟವ ಕಟ್ಟಿಸಿ । ವನವನ್ನು ಪೊಕ್ಕೊಂದೆ ಮನದಿ ॥ ಚಿನುಮಯನನು ನೆನೆವುತ್ತ ಮುಂದಿನ ಗತಿ । ಯನು ಕಾಣಬಾರದೇನಯ್ಯ ॥ ೭ ॥

ಭಾಮಿನಿ

ಇಂದು ನಾನಯ್ದಾ ಸಮಿಾರನ । ನಂದನನ ಕಪಟದೊಳು ತಡೆದರೆ ।

ಹೊಂದುವುದು ಮಾರೀಚಗಾಗಿಹ ಗತಿಯು ತನಗೆನುತ ॥ ಹಿಂದುಗಳೆ ವೈರವನು ರಾಮನೊ । ಳೆಂದು ಪೇಳಲ್ಕವನ ನುಡಿ ಕೇ । ಳ್ದಂದು ರೋಷಾವೇಶದಲಿ ದಶವದನನಿಂತೆಂದ ॥ ೧ ॥

ರಾಗ ಶಂಕರಾಭರಣ ಏಕತಾಳ

ಎಲವೊ ಕಾಲನೇಮಿ ನಿನಗೆ । ಸಲುಗೆ ಕೊಟ್ಟುದರಿಂದೆನಗೆ । ಹಲವು ಮಾತು ಸಾಕು ನಡೆಯೊ । ತಳುವದೆ ಬೇಗ ॥ ೧ ॥ ಒಳ್ಳೆ ಮಾತಿನಿಂದ ಪೋದ । ರೊಳ್ಳಿತಾಯ್ತು ಮತ್ತೆ ನಿನ್ನ । ಪಳ್ಳಿತನವ ತೋರಲೀಗ । ಕೊಲ್ಲುವೆನೆಂದ ॥ ೨ ॥ ಆಗಲಾಗಲದಕೇನು । ಹೋಗಬೇಕೆಂದುದಾದರೆ । ಬೇಗಲಪ್ಪಣೆಯ ನೀಡು । ಪೋಗುವೆ ನಾನು ॥ ೩ ॥

ವಾರ್ಧಿಕ

ಎಂದೆನುತಲಾ ಕಾಲನೇಮಿ ತಾ ದಶಶಿರನ । ನಂದು ಬೀಳ್ಕೊಟ್ಟಧಿಕವೇಗದಿಂದಾ ಲವಣ । ಸಿಂಧುವಂ ದಾಟಿ ಹಿಮವದ್ಗಿರಿಯ ಪಾರ್ಶ್ವಮಂ ಸಾರ್ದು ಬಳಿಕಂ ಮಾಯದಿ ॥ ಚಂದದಿಂದಲಿ ತಪವ ರಚಿಸುತ್ತಲವ ಶಿಷ್ಯ । ವೃಂದವಂ ಕೂಡಿ ಡಾಂಭಿಕವೆತ್ತಿ ಮುನಿವೇಷ । ದಿಂದಾ ಸಮೀರಜಂ ಬಹದರೊಳ್ ನಾಸಿಕದಿ ಬೆರಳಿಟ್ಟು ಕುಳ್ಳಿರ್ದನು ॥ ೧ ॥

ದ್ವಿಪದಿ

ಪುಂಡರೀಕಾಕ್ಷ ಕೇಳಿತ್ತ ಪವನಭವ । ಕಂಡನಯ್ಯತ್ತರುವಾಗಳೀ ತಪೋವನವ ॥ ೧ ॥ ಅಮಮ ಕಪಿ ಕರಡಿಗಳು ಝೇಂಕರಿಸುತಿರುವ । ಭ್ರಮರಗಳು ನಲಿದಿರ್ದ ಬರ್ಹಿಗಳ ಸ್ವರವ ॥ ೨ ॥ ಬಾಗಿರ್ದ ಕದಳಿ ಖರ್ಜೂರ ದಾಕ್ಷಿಗಳ । ಪೂಗ ಪುನ್ನಾಗ ಮೊದಲಾದ ವೃಕ್ಷಗಳ ॥ ೩ ॥ ವೈರವಿಲ್ಲದೆ ಕುಣಿವ ವಿವಿಧ ಮೃಗಕುಲವ । ಊರ್ವಿಗತಿ ಚೋದ್ಯವಿಹ ಪಕ್ಷಿಸಂಕುಲವ ॥ ೪ ॥ ಕಾಣುತತಿ ವೈಭವವನಂಜನಾಸುತನು । ಮಾಣದಾಗಲೆ ಮುಂದೆ ಬಂದ ಮತ್ತವನು ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಇಂತು ಮುಂದಯ್ತರೆ ಕಪಟದ ಮುನಿಗಳ । ತಿಂಥಿಣಿಯನು ಕಾಣುತ ॥ ಅಂತರಂಗದಿ ಚೋದಿಗವ ಪಟ್ಟು ಹನುಮಂತ । ನಿಂತು ಚಿಂತಿಸಿದನಾಗ ॥ ೧ ॥ ಹಿಂದೆ ನಾನಿಲ್ಲಿಗೆ ಬರುವಾಗಳೀ ಮುನಿ । ವೃಂದದಾಶ್ರಮವ ಕಾಣೆ ॥ ಇಂದಿದು ಪೊಸತು ಮಾರ್ಗವ ತಪ್ಪಲಿಲ್ಲ ತಾ । ನೆಂದು ಯೋಚಿಸು

ತಿರ್ದನು ॥ ೨ ॥ ಆದಡೇನಾಯಿತು ತೃಷೆ ಬಹಳುದಕದ । ವೇದನೆಯಿಂದೆನಗೆ ॥ ಈ ದಿವ್ಯ ಮುನಿಗಳಾಶ್ರಮವ ತೋರಿಸಿದ ಮ । ಹಾದೇವ ಕರುಣದಲಿ ॥ ೩ ॥ ಯಮಿಗಳ ಕಂಡುದಕವನೀಂಟುತಲೆ ತನ್ನ । ಶ್ರಮವನು ಕಳೆದುಕೊಂಡು ॥ ಗಮಿಸುವೆನಾಮೇಲೆ ದ್ರೋಣಪರ್ವತಕೆಂದು । ಕಮಲನಾಭನ ದೂತನು ॥ ೪ ॥ ನಡೆತಂದು ಕಂಡನು ಮಾಯದ ಮುನಿಗಳ । ಗಡಣದ ಮಧ್ಯದಲಿ ॥ ಕಡು ಡಂಭದಲಿ ಕುಳಿತಿಹ ಕಾಲನೇಮಿಯ । ದೃಢತರ ಭಕ್ತಿಯಲಿ ॥ ೫ ॥

ವಾರ್ಧಿಕ

ಕೆಲಬರುತ್ತಮ ಶಿವಧ್ಯಾನದಿಂ ಮೌನದಿಂ । ಕೆಲಬರಿರೆ ದೇವತಾರ್ಚನೆಗಳಿಂ ಘನಗಳಿಂ । ಕೆಲಬರತಿ ಡಂಭಕದ ಹೋಮದಿಂ ನೇಮದಿಂ ಕೆಲರು ದೃಢ ಯೋಗದಿಂದ ॥ ಕೆಲರಯ್ದೆ ವೇದಾಂತಘೋಷದಿಂ ತೋಷದಿಂ । ಕೆಲರೆಣಿಕೆಯಿಂ ಗೆಯ್ವ ಜಪಗಳಿಂ ತಪಗಳಿಂ । ಕೆಲಬಲದಿ ಕಪಟಮುನಿನಿಕರಮಂ ಸಕಲಮಂ ಕಂಡ ಪವಮಾನಸೂನು ॥ ೧ ॥

G. K. Bhat, M.A.
MANGALORE

ಭಾಮಿನಿ

ತರುಣಿ ಕೇಳಾ ಕೃತಕ ಶಿಷ್ಯರ । ನೆರಹಿಕೊಂಡಿಹ ಮಾಯಕದ ಮುನಿ । ವರನನೀಕ್ಷಿಸುತಾಕ್ಷಣವೆ ಪವಮಾನನಂದನನು ॥ ಎರಗಿ ಸಾಷ್ಟಾಂಗದಲಿ ಭಕ್ತಿಯ । ಹೊರಿಗೆಯಲಿ ಬಳಿಕೆದ್ದು ತನ್ನಯ । ಕರವ ಜೋಡಿಸಿಕೊಂಡು ಮತ್ತಿಂತೆಂದನವನೊಡನೆ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಪರಮ ಮುನೀಂದ್ರನೆ ಕರುಣದಿ ಲಾಲಿಸೆ । ನ್ನರಿಕೆಯನತಿ ಮುದದಿ ॥ ಸಿರಿರಾಮನೋಲೆಯಕಾರ ಹನುಮನೆಂದು । ಕರೆವರೆನ್ನನು ಜಗದಿ ॥ ೧ ॥ ರಾಯ ರಾಘವ ಕಳುಹಿದ ಸಂಜೀವನವನ್ನು । ತಾಯೆಂದು ದ್ರೋಣಾದ್ರಿಗೆ ॥ ಬಾಯಾರಲಿಲ್ಲಿಗೆ ಬಂದಿಹೆನೆನಗಿಷ್ಟು । ತೋಯವ ನೀಡೆನಗೆ ॥ ೨ ॥ ಎನಲು ಕಪಟಮುನಿ ಕಣ್ದೆರೆದೊಯ್ಯನೆ । ಹನುಮನ ಮೊಗ ನೋಡುತ ॥ ಘನಪರಿತೋಷ ತಾಳ್ದಂತೆ ಸನ್ಮಾನಿಸು । ತಿನಿತೆಂದ ನಸುನಗುತ ॥ ೩ ॥

ರಾಗ ಕಾಂಭೋಜ ಏಕತಾಳ

ಬಂದೆಯ ಹನುಮಂತ ಬಹಳ । ಚಂದವಾಯಿತಯ್ಯ । ಕಂದುಕುಂದೇಕೆ ಜಲವ । ತಂದೀವೆ ಕೊಳ್ಳಯ್ಯ ॥ ಒಂದು ದಿವಸ ನೀನಿಲ್ಲಿದ್ದು । ಮುಂದಯ್ದಬಹುದಯ್ಯ । ಇಂದು ನಿನ್ನ ಕಂಡು ಮನಕಾ । ನಂದವಾಯಿ

ತಯ್ಯ ॥ ೧ ॥ ಬಲ್ಲೆವು ಜ್ಞಾನದೃಷ್ಟಿಯೊ । ಳೆಲ್ಲವ ನಾವಯ್ಯ । ಫುಲ್ಲನೇತ್ರ ರಾಮನ ಕರುಣ । ದಲ್ಲಿ ಕಂಡೆವಯ್ಯ ॥ ಬಲ್ಲಿದ ಲಕ್ಷ್ಮಣನೆದ್ದ । ಸುಳ್ಳಲ್ಲ ಕೇಳಯ್ಯ । ತಲ್ಲಣಿಸಬೇಡ ಜಯ ನಿ । ಮ್ಮಲ್ಲಿ ಸೇರ್ದುದಯ್ಯ ॥ ೨ ॥

ಕಂದ

ಎಂದೊಡನೆ ಕಮಂಡಲಜಲ । ಮಂ ದಯದಿಂ ಕಾಲನೇಮಿಯಿಾಯ ಲ್ಕಾಗಳ್ ॥ ವಂದಿಸಿ ಮರುತಜನಿದರೊಳ । ಗೆಂದಿಗು ಕೃಪೆ ಮಾಣದೆನುತ ಲವನೊಳುಸಿರ್ದಂ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ಮುನಿವರನೆ ಲಾಲಿಸುವುದು । ಈ ಜಲದಿ । ಘನವಾದ ಕೃಪೆ ಮಾಣದು ॥ ಎನಗೆ ನಿರ್ಮಲ ಸರಸಿಯ । ತೋರಿದರೆ । ಮನದಣಿಯೆ ಕೊಂಬೆ ಜೀಯ ॥ ॥ ೧ ॥ ಎನಲವನು ಕೃತಕಗಳನು । ಗೆಯ್ದು ಕೊಳ । ವನು ತೋರಿಸಿದನಾತನು ॥ ಮನದಣಿಯಲಾ ಜಲವನು । ಕಂಗಳೆರ । ಡನು ಮುಚ್ಚಿಕೊಂಡು ನೀನು ॥ ॥ ೨ ॥ ಕುಡಿದು ಬಾರೆನ್ನ ಬಳಿಗೆ । ಉಪದೇಶ । ಕೊಡುವೆನಾಮೇಲೆ ನಿನಗೆ ॥ ಕಡು ಗುಪಿತ ಮಂತ್ರಗಳನು । ಪೋಗೆನಲು । ತಡೆಯದಯ್ದಿದನಾತನು ॥ ೩ ॥

ವಾರ್ಧಿಕ

ಬಡನಡುವ ಬಾಲೆ ಕೇಳ್ ಬಳಿಕಾ ಸಮಿಾರಜಂ । ತಡೆಯದಯ್ತಂದು ಕಪಟದ ಸರೋವರವನಿಳಿ । ದೊಡನಕ್ಷಿಗಳ ಮುಚ್ಚಿ ನೀರ್ಗುಡಿವ ಸಮಯದೊಳಗೊಂದು ಪೆರ್ಮೊಸಳೆ ಬಂದು ॥ ಪಿಡಿದೆಳೆವುತಿರಲಿದೇನೆಂದು ಕಣ್ದೆರೆದವಂ । ಕಡುಕಿದಾ ಮಕರಿಯಂ ಕಂಡು ಕಡು ಕೋಪದಿಂ । ದೆಡಗಾಲಿನಿಂ ಮೆಟ್ಟಿ ಸೀಳ್ದಾತತೂಕ್ಷಣದಿ ತಡಿಗೆ ಬಿಸುಟಂ ಭರದೊಳು ॥ ೧ ॥

ಭಾಮಿನಿ

ಅರಸಿ ಕೇಳಾಶ್ಚರ್ಯ ಹನುಮನ । ಚರಣ ಸೋಂಕಲ್ಕಾ ಶರೀರವು । ತೊರೆದು ಗಗನದಿ ದಿವ್ಯನಾರಿಯ ರೂಪವನು ತಾಳ್ದು ॥ ಮಿರುಪ ಸರ್ವಾಭರಣದಿಂ ಪೂ । ಶರನ ಮುಂಗೈಗಿಣಿಯ ತೆರದಲಿ । ಹರುಷದಿಂ ಕೈಮುಗಿದು ಪವನಜಗೆಂದಳಾ ಕಾಂತೆ ॥ ೧ ॥

ರಾಗ ಆರಭಿ ರೂಪಕತಾಳ

ಜಯ ದಶಾಸ್ಯದರ್ಪಸಂಹರ । ಜಾನಕೀಂದ್ರ । ಪ್ರಿಯ ಪದಾರವಿಂದ ಮಧುಕರ ॥ ಭಯವಿನಾಶ ವಾನರೇಶ । ನಯದೊಳಿದನು ಲಾಲಿಸಯ್ಯ ॥ ಜಯ ॥ ೧ ॥ ಹಿಂದೆ ಮೌನಿಶಾಪದಿಂದಲಿ । ಮಕರಿರೂಪ । ದಿಂದ ಬಿದ್ದೆನೀ

ಸರಸಿಯಲಿ ॥ ತಂದೆ ನಿನ್ನ ಪಾದ ಸೋಂಕ । ಲಿಂದು ನಾ ಕೃತಾರ್ಥಳಾದೆ ॥ ಜಯ ॥ ೨ ॥ ವನದಿ ನೀನು ನೋಡಿದಾತನು । ಮುನಿಪನಲ್ಲ । ದನುಜ ಕಾಲನೇಮಿಯವನನು ॥ ನಿನಗೆ ವಿಘ್ನವನ್ನು ಮಾಡ । ಲೆನುತಲಟ್ಟಿದನು ಖಳೇಂದ್ರ ॥ ಜಯ ॥ ೩ ॥ ಬೇಗವಧಿಸು ದುರುಳ ದೈತ್ಯನ । ತಡವ ಮಾಡ । ದೀಗಲಾ ಸುರಾಳಿಘಾತನ ॥ ಪೋಗು ನೀನು ತ್ರಿದಶಲೋಕ । ಕಾಗಿ ಪೋಪೆ ನಿನ್ನ ದಯದಿ ॥ ಜಯ ॥ ೪ ॥

ಭಾಮಿನಿ

ಎಂದು ಪೇಳ್ದಾ ನಾರಿಯಮರರ । ಮಂದಿರವನಯ್ದಲ್ಕೆ ಹನುಮನು । ಬಂದನಿತ್ತಲು ಬೊಬ್ಬಿಡುತ ಖಳನಿರ್ದ ಬಳಿಗಾಗಿ ॥ ನಿಂದು ಭಯದಿಂದಸುರ ಮಾರುತ । ನಂದನನ ಕಾಣುತ್ತಲಿದೆನಿಂ । ದೊಂದು ಹರಿಬದೊಳೆನುತ ಯೋಚಿಸುತೆಂದನೀ ತೆರದಿ ॥ ೧ ॥

ರಾಗ ತೋಡಿ ಅಷ್ಟತಾಳ

ಏನಯ್ಯ । ಹನುಮ । ಏನಯ್ಯ ॥ ಪ ॥ ಏನಯ್ಯ ನಿನ್ನನುಮಾನವು ಹನುಮ । ಸಾನುರಾಗದಿ ಪೇಳು ಸಂಗರಭೀಮ ॥ ಏನಯ್ಯ ॥ ಅ ॥ ಯಾತಕೆ ಸುಮ್ಮನೆ ಚೇಷ್ಟೆಯ ಮಾಳ್ಪೆ । ಮಾತಾಡದುಗ್ರ ಭಾವದಲಿ ನಿಂದಿರ್ಪೆ ॥ ಪ್ರೀತಿಯ ಶಿಷ್ಯನು ನೀನೆಮಗೆಸೆ । ಈ ತೆರದಲಿ ನಮ್ಮ ಮೇಲಿಪ್ಪ ಮುನಿಸೆ ॥ ಏನಯ್ಯ ॥ ೧ ॥ ಕೊಡುವೆನು ಮಂತ್ರೋಪದೇಶಂಗಳನ್ನು । ಕೊಡು ಬೇಗ ಗುರುದಕ್ಷಿಣೆಯ ನಮಗಿನ್ನು ॥ ತಡವ ಮಾಡುವುದೇಕೊ ವಿನಯದಿ ಕೊಳ್ಳೊ । ಹುಡುಗಾಟಿಕೆಯ ಮಾಡಬೇಡಿತ್ತ ನಿಲ್ಲೊ ॥ ಏನಯ್ಯ ॥ ೨ ॥

ಭಾಮಿನಿ

ಹುಡುಗತನವಲ್ಲೆಲವೊ ಮೊದಲಲಿ । ಕೊಡುವೆ ಗುರುದಕ್ಷಿಣೆಯ ಕಡೆಯೊಳು । ಕೊಡಬಹುದು ಮಂತ್ರೋಪದೇಶವನೆನುತ ಮಾರುತಿಯು ॥ ಮಿಡುಕಿ ಕೋಪದೊಳಾಡುಗಚ್ಚುತ । ದೃಢತರದ ಮುಷ್ಟಿಯನು ಬಂಧಿಸಿ । ಹಿಡಿಯೆನುತಲಾ ದುರುಳ ದಾನವನುರವನೆರಗಿದನು ॥ ೧ ॥

ರಾಗ ಭೈರವಿ ಮಟ್ಟೆತಾಳ

ಭರಿತ ಕೋಪದಿಂದ ಹನುಮನಾಡುಗಚ್ಚುತ । ಭರದ ಮುಷ್ಟಿಯಿಂದ ತಿವಿಯಲವನು ಕಾಣುತ ॥ ೧ ॥ ಮರಳಿ ಹೊಯ್ದು ಘೋರುಗೆಯ್ದನೇನ ನೆಂಟೆನು । ಮರುತಜಾತ ತಿವಿದನಾಗ ಜವದಿ ಖಳನನು ॥ ೨ ॥ ತಡವೆ

ಮಾಡಬಾರದೀಗ ತಾನೆನುತ್ತಲಿ । ಒಡನೆ ವಾಯುಸುತನು ದೃಢದ ಮುಷ್ಟಿಯಿಂದಲಿ ॥ ೩ ॥ ಮುಳಿದು ಶಿರವನೆರಗೆ ನೆತ್ತಿ ಬಿರಿಯೆ ದನುಜನು । ಇಳೆಗೆ ಬೊಬ್ಬಿಡುತ್ತ ಬೀಳುತಸುವ ತೊರೆದನು ॥ ೪ ॥

ಭಾಮಿನಿ

ಸರ್ವಮಂಗಳೆ ಕೇಳು ದನುಜನ । ನುರ್ವಿಗೊರಗಿಸಿ ಬಳಿಕ ಹನುಮನು । ಗರ್ವಗತಿಯಲಿ ಕ್ಷಿತಿಯ ಮಾರ್ಗವ ಪಿಡಿದು ತವಕದಲಿ ॥ ಸರ್ವದೇಶವ ಕಳೆದು ಮಿಗಿಲಲಿ । ತೋರ್ವ ಶರಧಿಯ ದಾಟಿ ಬಂದು ಸು । ಪರ್ವಜನ ಹೊಗಳಲ್ಕೆ ಕಂಡನು ಕ್ಷೀರಸಾಗರವ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಅಳಿಯನೆ ಹರಿಯು ಹೆಮ್ಮಗಳೆ ರಮಾದೇವಿ । ಚೆಲುವ ಚಂದ್ರಮನೆನ್ನ ಮಗನು ॥ ತಿಳಿಯಲಿಳೆಯೊಳೆಣೆಯಿಲ್ಲೆನುವಂತೆ ಕಂ । ಗೊಳಿಸಿತು ಕ್ಷೀರಸಾಗರವು ॥ ೧ ॥ ಆ ದುಗ್ಧಶರಧಿಯ ಕಂಡು ಚಿತ್ರದಿ ಕಡು । ಮೋದದಿ ವಾಯುನಂದನನು ॥ ಪಾದವನೂರಿದಲ್ಲಿಂದ ರಂಜಿಪ ಭದ್ರ । ಭೂಧರವನು ಸುತ್ತಿ ಸುಳಿದ ॥ ೨ ॥ ಅರಸಿದಡಲ್ಲಿ ಜೀವೌಷಧಿ ಸಮಯಕ್ಕೆ । ದೊರಕದಿರಲ್ಕೆ ಮಾರುತಿಯು ॥ ಮುರಿದು ಕೊಂಡಾ ಗಿರಿ ಮಸ್ತಕವನು ಮತ್ತ । ಲ್ಲಿರದೆ ಸೈವರಿದನಾಕ್ಷಣದಿ ॥ ೩ ॥

ಕಂದ

ಹನುಮಂ ಜೀವೌಷಧಿಯಂ । ಘನಬೇಗದೊಳಯ್ದಿ ತಿರುಗಲ್ಕಿತ್ತಂ ॥ ಮನದೊಳ್ ಚಿಂತೆಯ ತಾಳುತ । ವನಜಾಂಟಕನಾಗಳೆಂದನಾ ಜಾಂಬವನೊಳ್ ॥ ೧ ॥

ರಾಗ ನೀಲಾಂಬರಿ ತ್ರಿವುಡೆತಾಳ

ಯಾಕಿನ್ನು ಬಂದುದ ಕಾಣೆನು । ಜಗ । ದೇಕವೀರನು ನಮ್ಮ ಹನುಮನು ॥ ಪೋಕತನದೊಳಾರು ತಡೆದರೊ । ಪೋಗು । ವಡವಿ ಮಾರ್ಗದೊಳಾತಂಕಿಸಿದರೊ ॥ ೧ ॥ ಎನಲೆಂದನಾ ಜಾಂಬವಂತನು । ದೇವ । ಮನದಿ ಚಿಂತಿಸದಿರು ಹನುಮನು ॥ ಕ್ಷಣದಲ್ಲಿ ಬಂದನೆಂದೆಣಿಸಿಕೊ । ಲ । ಕ್ಷ್ಮಣನೆದ್ದನೆಂದು ನೀ ಗ್ರಹಿಸಿಕೊ ॥ ೨ ॥

ವಾರ್ಧಿಕ

ಎನುತ ಮತ್ತವರೀರ್ವರಿಂತು ಮಾತಾಡುತಿರ । ಲನಿತರೊಳು ಗಗನ ಪಥದೊಳಗಂಜನಾಸುತಂ । ಘನ ಘೋಷಮಂ ಗೆಯ್ಯುತಿಳಿದನಸುರಾಂತಕನ

ಮುಂದೆ ರೋಮಾಂಚನದೊಳು ॥ ಮನದೊಳಾನಂದದಿಂದುರೆ ತಂದ ಮೊರಡಿಯಂ । ಇನಕುಲಜನಿದಿರೊಳಿಳುಹಿದು ಭಕ್ತಿಯಿಂದ ವಂ । ದನೆಗೆಯ್ದು ಜಯ ಜಯೆನ್ನುತ ಬಳಿಕ ಮುಕುಳಿತಕರಾಂಜಲಿಯೊಳಿಂತೆಂದನು ॥ ೧ ॥

ರಾಗ ಮಾರವಿ ಏಕತಾಳ

ಇಂದೀವರದಳಲೋಚನ ಸುರಮುನಿ । ವೃಂದವಿನುತಚರಣ ॥ ತಂದೆನು ಜೀವೌಷಧಿಯನು ನೋಡುವು । ದೆಂದು ನಮಿಸಿ ನಿಂದ ॥ ೧ ॥ ಏ ಸುಷೇಣ ಬಾರೆನ್ನಯ ತಮ್ಮನಿ । ಗೌಷಧಿಯನು ರಚಿಸೈ ॥ ಭೇಷಜವನು ನೀ ತಿಳಿದಿಹೆ ಎನುತಲಿ । ದಾಶರಥಿಯು ನುಡಿದ ॥ ೨ ॥ ಎಂದೆನಲಾಗ ಸುಷೇಣ ಮರುತ್ಸುತ । ತಂದಾ ಗಿರಿಶಿರವ । ಚಂದದೊಳರಸಿ ಮಹೌಷಧಿಯನು ತೆಗೆ । ದಂದು ಮಹೋತ್ಸವದಿ ॥ ೩ ॥ ಕರದೊಳಗಾ ಮೂಲಿಕೆಯನು ಮರ್ದಿಸಿ । ಭರವಸದಿಂದಾಗ ॥ ವರ ಸೌಮಿತ್ರಿಯ ನಾಸಾಪುಟದೊಳ । ಗೆರೆದನು ತವಕದಲಿ ॥ ೪ ॥ ಧಾರಿಣಿಯಲಿ ಮಲಗಿದ ನೀಲಾಂಗದ । ಸೂರ್ಯಜ ಮೊದಲಾದ ॥ ವೀರ ಸುಭಟರೆಲ್ಲರಿಗೌಷಧಿಯನು । ಬೇರೆ ಬೇರೆ ಗೆಯ್ದ ॥ ೫ ॥

ಭಾಮಿನಿ

ತರುಣಿ ಕೇಳ್ ಮಿಗೆ ನಿದ್ರೆ ತಿಳಿದವ । ರರಿದು ಮೈಮುರಿದೇಳುವಂದದಿ । ಮರವೆ ಮಾಣ್ದು ಸಮಸ್ತ ಕಪಿಬಲವೆದ್ದುದಾಕ್ಷಣಕೆ ॥ ಅರಿವು ತಲೆದೋರ್ದೊಡನೆ ಲಕ್ಷ್ಮಣ । ನರರೆ ಫಡ ದಶಕಂಠ ಹಿಂದಕೆ । ಸರಿಯದಿರು ನಿಲ್ಲೆನುತಲೆದ್ದನು ಕೊಂಡು ಧನುಶರವ ॥ ೧ ॥

ರಾಗ ಮಧುಮಾಧವಿ ತ್ರಿವುಡೆತಾಳ

ಎದ್ದು ಲಕ್ಷ್ಮಣ ಧನುಶರಂಗಳ । ತಿದ್ದುತಿರೆ ಸಂತೋಷಶರಧಿಯೊ । ಳದ್ದಿ ತಮ್ಮನೆ ಬಾರೆನುತ್ತಲಿ । ಮುದ್ದುಗೆಯ್ದನು ಭರದಲಿ ॥ ರಾಘವೇಂದ್ರ ॥ ॥ ೧ ॥ ಎತ್ತಿ ತೊಡೆಯಲಿ ಕುಳ್ಳಿರಿಸಿ ಮಿಗೆ । ನೆತ್ತಿಯನು ವಾಸನಿಸಿ ಸಂತಸ । ವೆತ್ತು ಪವನಾತ್ಮಜನ ಮೊಗ ನೋ । ಡುತ್ತ ಬಳಿಕಿಂತೆಂದನು ॥ ನಮ್ರದಿಂದ ॥ ॥ ೨ ॥ ಎಲೆ ಹನುಮ ನಿನ್ನಯ ಸಮರ್ಥದ । ನೆಲೆಯ ಬಲ್ಲವರಾರು ತಮ್ಮನ । ನುಳುಹಿ ಕೊಟ್ಟುಪಕಾರಿ ನೀನೈ । ಸಲೆ ಎನುತಲಾನಂದದಿ ॥ ಮನ್ನಿಸುತಲಿ ॥ ॥ ೩ ॥ ಕೈದಣಿಯೆ ಬಿಗಿದಪ್ಪಿ ಹನುಮನ । ಮೈದಡವಿ ಬಳಿಕಿನಸುತಾದ್ಯರ । ನೈದೆ ಸುಸ್ನೇಹದಲಿ ಮನ್ನಣೆ । ಗೆಯ್ದನಾ ರಘುವೀರನು ॥ ಹರುಷದಿಂದ ॥ ೪ ॥ ಸುರರು ಪೂಮಳೆಗರೆದರಭ್ರದಿ । ಪರಮ ಸಂತಸದಿಂದಲಪ್ಸರ । ತರುಣಿಯರು ಪಾಡುತ್ತಲೆತ್ತಿದ । ರಿರದೆ ರತುನಾರತಿಯನು ॥ ಸಂಭ್ರಮದೊಳು ॥ ೫ ॥

ರಾಗ ಧವಳಾರ ತ್ರಿವುಡೆತಾಳ

ಕೊಂಕಿನ ಕೊರಳಿನ ಸವಿನೋಟದ । ಕಿಂಕಿಣಿಕಲದುಬ್ಬಿದ ಜಘನದ । ಪಂಕಜಲೋಚನದ ಕೆಳದಿಯರು ॥ ಕೆಳದಿಯರೊಡಗೂಡಿ ವಿಲಾಸದಿ । ಕುಂಕುಮದಾರತಿಯ ಬೆಳಗಿರೆ ॥ ಶೋಭಾನೆ ॥ ೧ ॥ ರಾಮಗೆ ರಘು ವಂಶಸುಧಾರ್ಣವ । ಸೋಮಗೆ ಸುರನುತಪದಪದ್ಮಗೆ । ಕಾಮಿತಾರ್ಥಗಳನೊಲಿದೀವ ॥ ಒಲಿದೀವಗೆ ಸದ್ಗುಣಧಾಮಗೆ । ಹೇಮದಾರತಿಯ ಬೆಳಗಿರೆ ॥ ಶೋಭಾನೆ ॥ ೨ ॥ ವರ ಲಕ್ಷ್ಮಣದೇವಗೆ ಹನುಮಗೆ ಹರಿಭಕ್ತ ವಿಭೀಷಣಗಜಸುತ । ತರಣಿಜ ಮೊದಲಾದ ಕಪಿಗಳಿಗೆ ॥ ಕಪಿಗಳಿಗೆ ಪಾಡುತ ಪೊಗಳುತ । ಕುರುಜಿನಾರತಿಯ ಬೆಳಗಿರೆ ॥ ಶೋಭಾನೆ ॥ ೩ ॥

ಭಾಮಿನಿ

ನಾರಿ ನೀ ಬೆಸಗೊಂಡ ಪ್ರಶ್ನೆಗೆ । ಪೂರಣವದಾಯ್ತಿಲ್ಲಿಗಾ ರಘು । ವೀರನತಿ ಮಂಗಳದೊಳೊಪ್ಪಿದನಧಿಕ ಹರುಷದಲಿ ॥ ಬೇರೆ ಮನಗೊಡದಿದನು ಕೇಳ್ವರ । ನಾ ರಘೂದ್ವಹ ನಿರತ ಪೊರೆವನು । ಭೂರಿ ಕರುಣದೊಳೆಂದು ಪಾರ್ವತಿಗರುಹಿದನು ಶಿವನು ॥ ೧ ॥

ರಾಗ ಭೈರವಿ ಝಂಪೆತಾಳ

ಇಂತು ಶಿವನೊಲಿದು ನಿಜ । ಕಾಂತೆಗರುಹಿದ ಕಥೆಯ । ಸಂತಸದಿ ಜನರು ತಿಳಿ । ವಂತೆ ಕನ್ನಡದಿ ॥ ೧ ॥ ಪಾಕಾರಿಮುಖ ಸುರಾ । ನೀಕ ಸನ್ನುತಚರಣ । ಲೋಕನಾಥನೆ ಸಲಹೊ । ನೀ ಕೃಪೆಯೊಳೆನ್ನ ॥ ೨ ॥ ವರಗೋಪ್ಯಪುರದ ಶಂ । ಕರನ ಕರುಣಾಂಸದಿ ಪರಮ ಮಂಗಳವೆನಿಸಿ । ವಿರಚಿಸಿದೆನಿದನು ॥ ೩ ॥

ರಾಗ ಕಲ್ಯಾಣಿ ಏಕತಾಳ

ಮಂಗಲಂ । ಜಯ । ಮಂಗಲಂ ॥ ಪ ॥ ಸುಮನಸಸನ್ನುತಪಾತ್ರನಿಗೆ । ಕಮಲದಳಾಂಬಕಮಿತ್ರನಿಗೆ ॥ ಹಿಮಕರಚೂಡಗೆ ವೃಷಭಾರೂಢಗೆ । ಯಮಿಜನಪೂಜಿತಚರಣನಿಗೆ ॥ ಮಂಗಲಂ ॥ ೧ ॥ ಶೂರ್ಪಶ್ರೋತ್ರನ ಜನಕನಿಗೆ । ದರ್ಪಕನಾಶಗೆ ಪುರಹರಗೆ ॥ ಕರ್ಪೂರಗೌರಗೆ ಕಲುಷವಿದೂರಗೆ । ಸರ್ಪಾಭರಣಪುರಾಂತಕಗೆ ॥ ಮಂಗಲಂ ॥ ೨ ॥ ತರುಣಾರುಣಶಶಿಭಾಸನಿಗೆ । ಶರಣಾಗತಪರಿತೋಷನಿಗೆ ॥ ವರಗೋಪ್ಯಾಪುರಧಾಮಗೆ ಭೀಮಗೆ । ಪರತರರೂಪ ಉಮಾಧವಗೆ ॥ ಮಂಗಲಂ । ಜಯ ಮಂಗಲಂ ॥ ೩ ॥

ಯಕ್ಷಗಾನ ಅತಿಕಾಯಕಾಳಗ ಸಂಪೂರ್ಣ

ಶ್ರೀಕೃಷ್ಣಮುದ್ರಣಾಲಯ, ಉಡುಪಿ. ಶಾ. ಶಕ. ೧೮೭೨. 1,000.1.1950